28th Year of Publication. Phone: 728.

ವಾರ್ಷಿಕ ಚಂದಾ
ಸ್ಥಳೀಯರಿಗೆ:
ಒಂದು ವರ್ಷಕ್ಕೆ
ರೂ. 6—0—0.
ಆರು ತಿಂಗಳಿಗೆ
ರೂ. 3—0—0.
ಹೊರಸ್ಥಳೀಯರಿಗೆ:
ಒಂದು ವರ್ಷಕ್ಕೆ
ರೂ. 7—0—0.
ಆರು ತಿಂಗಳಿಗೆ
ರೂ. 3—8—0.

ಪ್ರಭಾತ

PRABHAT WEEKLY

ಬೆಲೆ: 12 ನ. ಪೈಸೆ

ಸಂಪುಟ: ೨೮. ಸಂಚಿಕೆ: ೪೯.) ಸಂಪಾದಕ: ಕುಡ್ಪಿ ವಾಸುದೇವ ಶೆಣೈ. ರವಿವಾರ ತಾ. 13—1—1963 (Vol: XXVIII. No.. 49

ವಿವಿಧ ವಿನೋದಾವಳಿಗಳು

(ಶ್ರೀ ಕರ್ನಾಟಕ ಶಿವಸೇವಾ ಸಮಿತಿಯ ಕಟ್ಟಡದ ಸಹಾಯಾರ್ಥವಾಗಿ)

ಸ್ಥಳ: ಮಂಗಳೂರು ಅತ್ತಾವರ ಹೊಸರುಕುಡಿಕೆಯ ಬಯಲಲ್ಲಿ

ನೃತ್ಯ, ಸಂಗೀತ, ಸರ್ಕಸ್,
ಗೊಂಬೆ ಮಾತಾಡುವುದು,
ಮೇಜಿಕ್, ಇತ್ಯಾದಿ.

ವಿಶೇಷ ಆಕರ್ಷಣೆ:

ಪ್ರೊಫೆಸರ್ ಎಲ್. ಎಚ್. ಸ್ಮಿತ್, D. Ph E (ಅಮೇರಿಕ) ಇವರ ಅನೇಕ ರೋಮಾಂಚಕಾರಿ ಪ್ರದರ್ಶನವಿದೆ.

ಪ್ರವೇಶ ದರ ಕೇವಲ 15 ನಯಾ ಪೈಸೆ

Estd: 1923. Phone: 94.

JAYA LAXMI BANK, LTD.

(Scheduled Bank)

Registered and Head Office:
Ganapathy High School Road, MANGALORE (Mysore State)

BRANCHES

IN MYSORE: MANGALORE, PUTTUR, MUDIGERE, CHIKMAGALUR, BANGALORE, BIRUR and SHIRALI.
IN KERALA: MANJESHWAR, KUMBLA, KASARAGOD, CANNANORE, KUNDOTTY and MALAPPURAM.

ALL TYPES OF BANKING BUSINESS TRANSACTED

ATTRACTIVE INTEREST
Rates Offered on Your Deposits
Deposits Exceed Rupees ONE CRORE.

ಜಯಲಕ್ಷ್ಮಿ ಬೇಂಕ್, ಲಿಮಿಟೆಡ್

ಪ್ರಧಾನ ಕಚೇರಿ: ಮಂಗಳೂರು. ಸ್ಥಾಪನೆ: 1923.

ಮೈಸೂರು ಮತ್ತು ಕೇರಳ ರಾಜ್ಯದಲ್ಲೆಲ್ಲಾ ಬ್ರಾಂಚುಗಳು
ಒಟ್ಟು ಠೇವಣೆಗಳು ಒಂದು ಕೋಟಿ ರೂಪಾಯಿಗಳಿಗೂ ಮಿಕ್ಕಿವೆ.

VALUE AND SERVICE

Have won the Sovereign Tiles and Terracotta their unparalleled reputation.

Their buyers are their patrons, and that patronage has been won by long and economic service.

Sovereign Tile Works,
Boloor, Mangalore.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5.
2. ಕರೆ, ಚಿಕ್ಕವ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ.
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3.

ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬೇಂಕ್, ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, (ದ. ಕನ್ನಡ.

Tele: GOLDKING. ತಾಜಾ ವಜ್ರಗಳಿಗೆ ಮತ್ತು ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ ಸುವರ್ಣಗೃಹ.

ಎಸ್. ಎಲ್. ಶೇಟ್,
ಡಾಯಮಂಡ್ ಹೌಸ್
ಕೆ. ಎಸ್. ರಾವ್ ರೋಡು, ಮಂಗಳೂರು-1

ನಿಮಗೆ ಬೇಕಾಗುವ ಚಿನ್ನದ ಆಭರಣಗಳನ್ನು ನಮ್ಮ ನುರಿತ ಕೆಲಸಗಾರರಿಂದ ನಿಮ್ಮ ಮನಸ್ಸೊಪ್ಪುವ ರೀತಿಯಲ್ಲಿ ಅಲ್ಪ ಕಾಲದಲ್ಲಿ ತಯಾರಿಸಿಕೊಡಲಾಗುವುದು.

Propt S. L. SHET.

ಮಹಾಭಾರತ ಕಥಾಮೃತ

(ಲೇಖಕ: ಶ್ರೀ ಕೋ. ಶ. ಕಾರಂತ, ಬಿ.ಎ., ಬಿ.ಎಲ್., ಎಡ್ವೊಕೇಟ್, ಮಂಗಳೂರು.)

ಅಜಗರ ಯುಧಿಷ್ಠಿರ ಸಂವಾದ

ಅಜಗರನು, "ರಾಜ ಯುಧಿಷ್ಠಿರನೇ! ಬ್ರಾಹ್ಮಣನೆಂದರೆ ಯಾರು? ಅವನು ತಿಳಿಯಬೇಕಾಗಿರುವ ತತ್ವವು ಯಾವುದು? ಎಂಬ ತನ್ನ ಮೊದಲಿನ ಪ್ರಶ್ನೆಯನ್ನು ಕೇಳಿದನು.

ಯುಧಿಷ್ಠಿರನು ಈ ಪ್ರಕಾರ ಉತ್ತರಿಸಿದನು.

ಸತ್ಯಂ ದಾನಂ ಕ್ಷಮಾ ಶೀಲಮಾನೃಶಂಸ್ಯಂ ತಪೋ ಘೃಣಾ।
ದೃಶ್ಯಂತೇ ಯತ್ರ ನಾಗೇಂದ್ರ ಸ ಬ್ರಾಹ್ಮಣ ಇತಿ ಸ್ಮೃತಃ ॥ ೧೮೦-೨೧ ॥

"ನಾಗರಾಜ! ಯಾರಲ್ಲಿ ಸತ್ಯ, ದಾನ, ಕ್ಷಮಾ, ಸುಶೀಲತೆ, ಕ್ರೂರತನದ ಅಭಾವ, ತಪಸ್ಯ ಮತ್ತು ದಯೆ ಸದ್ಗುಣಗಳು ಕಾಣಬರುತ್ತವೆಯೋ ಅವನು ಬ್ರಾಹ್ಮಣನೆಂದು ಕರೆಯಲ್ಪಡುತ್ತಾನೆ. ಯಾವುದನ್ನು ಹೊಂದುವುದರಿಂದ ಸುಖದುಃಖಗಳು ಮುಕ್ತವಾಗುತ್ತವೆಯೋ ಆ ಪರಮ ಬ್ರಹ್ಮವಸ್ತುವೇ ತಿಳಿಯಬೇಕಾದ ತತ್ವ ವಿಚಾರವು."

ಸರ್ಪನು ಈ ವಿಚಾರ ಮಹತ್ತಾದ ಪ್ರಶ್ನೆಯನ್ನು ಕೇಳಿದನು.

ಚಾತುರ್ವರ್ಣ್ಯಂ ಪ್ರಮಾಣಂ ಚ ಸತ್ಯಂ ಚ ಬ್ರಹ್ಮ ಚೈವ ಹಿ।
ಶೂದ್ರೇಷ್ವಪಿ ಚ ಸತ್ಯಂ ಚ ದಾನಮಕ್ರೋಧ ಏವ ಚ।
ಆನೃಶಂಸ್ಯಮಹಿಂಸಾ ಚ ಘೃಣಾ ಚೈವ ಯುಧಿಷ್ಠಿರ ॥ ೨೩ ॥

"ಯುಧಿಷ್ಠಿರನೇ! ಸತ್ಯಗುಣ ಮತ್ತು ಬ್ರಹ್ಮತತ್ವವು ನಾಲ್ಕು ವರ್ಣದವರಿಗೂ ಹಿತಕರವಾಗಿವೆ. ಸತ್ಯ, ದಾನ, ಅಕ್ರೋಧ, ಕ್ರೂರತೆ ಇಲ್ಲದಿರುವ ಗುಣ, ಅಹಿಂಸೆ ಮತ್ತು ದಯೆ ಆದಿ ಸದ್ಗುಣಗಳು ಶೂದ್ರರಲ್ಲಿ ಕಾಣಬರುತ್ತವೆ.

ಯುಧಿಷ್ಠಿರನು ಆ ಪ್ರಶ್ನೆಗೆ ಈ ಪ್ರಕಾರ ನುಡಿದನು

ಶೂದ್ರೇ ತು ಯದ್ಭವೇಲ್ಲಕ್ಷ್ಮ ದ್ವಿಜೇ ತಚ್ಚ ನ ವಿದ್ಯತೇ।
ನ ವೈ ಶೂದ್ರೋ ಭವೇಚ್ಛೂದ್ರೋ ಬ್ರಾಹ್ಮಣೋ ನ ಚ ಬ್ರಾಹ್ಮಣಃ ॥ ೨೫ ॥
ಯತ್ರೈತಲ್ಲಕ್ಷ್ಯತೇ ಸರ್ಪ ವೃತ್ತಂ ಸ ಬ್ರಾಹ್ಮಣಃ ಸ್ಮೃತಃ।
ಯತ್ರೈತನ್ನ ಭವೇತ್ ಸರ್ಪ ತಂ ಶೂದ್ರಮಿತಿ ನಿರ್ದಿಶೇತ್ ॥ ೨೬ ॥

ಶೂದ್ರನಲ್ಲಿಯೂ ಕೂಡಾ ಸತ್ಯ ಆದಿ ಗುಣಗಳು ಇದ್ದರೆ ಅವನು ಶೂದ್ರನಲ್ಲವು ಅಂತಹ ಗುಣಗಳು ಬ್ರಾಹ್ಮಣನಲ್ಲಿ ಇಲ್ಲದಿದ್ದರೆ (ಎಂದರೆ ವರ್ಣಾಶ್ರಮ ಧರ್ಮಾನುಸರ, ಜನ್ಮತಃ ಬ್ರಾಹ್ಮಣನಾದವನಲ್ಲಿ ಈ ಗುಣಗಳು ಇಲ್ಲದಿದ್ದರೆ) ಅವನು ಬ್ರಾಹ್ಮಣನಲ್ಲ. ಸರ್ಪಶ್ರೇಷ್ಠನೇ! ಯಾರಲ್ಲಿ ಸತ್ಯ ಆದಿ ಲಕ್ಷಣಗಳು ಕಾಣುತ್ತವೆಯೋ ಅವನು ಬ್ರಾಹ್ಮಣ ಬ್ರಾಹ್ಮಣನು ಮತ್ತು ಇವುಗಳಿಲ್ಲದವನು ಶೂದ್ರನು ಎಂದು ತಿಳಿಯಬೇಕು.

ಸರ್ಪರಾಜನು

ಯದಿ ತೇ ವೃತ್ತತೋ ರಾಜನ್ ಬ್ರಾಹ್ಮಣಃ ಪ್ರಸಮೀಕ್ಷಿತಃ।
ವೃಥಾ ಜಾತಿಸ್ತದಾಯುಷ್ಮನ್ ಕೃತಿರ್ಯಾವನ್ನ ವಿದ್ಯತೇ ॥ ೩೦ ॥

ಆಯುಷ್ಮಂತನಾದ ನರೇಶನೆ! ಆಚಾರದಿಂದ ಬ್ರಾಹ್ಮಣನ ಪರೀಕ್ಷೆಯಾಗುವದಾದರೆ, ಕರ್ಮವಿಲ್ಲದ ಜಾತಿಯು ವ್ಯರ್ಥವೆಂದಾಗುತ್ತದಲ್ಲವೇ?" ಎಂಬ ಮರು ಪ್ರಶ್ನೆಯನ್ನು ಕೇಳಿದನು. ಅದಕ್ಕೆ ಧರ್ಮರಾಯನು ಹೀಗೆಂದನು.

ಜಾತಿರತ್ರ ಮಹಾಸರ್ಪ ಮನುಷ್ಯತ್ವೇ ಮಹಾಮತೇ।
ಸಂಕರಾತ್ ಸರ್ವವರ್ಣಾನಾಂ ದುಷ್ಪರೀಕ್ಷ್ಯೇತಿ ಮೇ ಮತಿಃ ॥ ೩೧ ॥

"ಮಹಾಮತಿಯಾದ ಸರ್ಪಶ್ರೇಷ್ಠ! ಮನುಷ್ಯನಲ್ಲಿ (ಚಾತುರ್ವರ್ಣಾನುಸಾರ) ಜಾತಿಯ ಪರೀಕ್ಷೆಯು ಬಹು ಕಠಿಣವು. ಏಕೆಂದರೆ ಈ ಕಾಲದಲ್ಲಿ ಎಲ್ಲಾ ವರ್ಣಗಳು ಸಂಕರ (ಸಮ್ಮಿಶ್ರಣ) ವಾಗುತ್ತಿವೆ. ಆದ್ದರಿಂದ ಪರೀಕ್ಷಿಸುವುದು ಬಹುಕಠಿಣವೆಂದು ನನ್ನ ವಿಚಾರವು.

ತಾವಚ್ಛೂದ್ರಸಮೋ ಹ್ಯೇಷ ಯಾವದ್ ವೇದೇ ನ ಜಾಯತೇ।
ತಸ್ಮಿನ್ನೇವಂ ಮತಿದ್ವೈಧೇ ಮನುಃ ಸ್ವಾಯಂಭುವೋಽಬ್ರವೀತ್ ॥ ೩೫ ॥
ಕೃತಕೃತ್ಯಾ ಪುನರ್ವರ್ಣಾ ಯದಿ ವೃತ್ತಂ ನ ವಿದ್ಯತೇ।
ಸಂಕರಸ್ತತ್ರ ನಾಗೇಂದ್ರ ಬಲವಾನ್ ಪ್ರಸಮೀಕ್ಷಿತಃ ॥ ೩೬ ॥

ಬಾಲಕನಿಗೆ ಜಾತಕರ್ಮಸಂಸ್ಕಾರಾದಿಗಳನ್ನು ಮಾಡಿ ವೇದಾಧ್ಯಯನವನ್ನು ಮಾಡುವದಿಲ್ಲವೋ ಅವನ (ಜನ್ಮತ ಬ್ರಾಹ್ಮಣನಾಗಿರುವುದಾದರೂ) ಶೂದ್ರನಿಗೆ ಸಮಾನನಾಗುವನು. (ಶೂದ್ರಸಮ) ಜಾತಿವಿಷಯದಲ್ಲಿ ಸಂದೇಹವಿದಾಗ ಸ್ವಾಯಂಭುವ ಮನುವು ಈ ಪ್ರಕಾರ ನಿರ್ಣಯವನ್ನು ಮಾಡಿರುವನು. ಬ್ರಾಹ್ಮಣಾದಿ ವರ್ಣಗಳಲ್ಲಿ ಎಂದರೆ ವೇದಾಧಿಕಾರಿಯಾದ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯವೆಂಬ ಈ ತ್ರಿವರ್ಣಗಳಲ್ಲಿ ವೈದಿಕ ಸಂಸ್ಕಾರ ಮತ್ತು ವೇದಾಧ್ಯಯನ ಮಾಡಿದರೂ ಇರಬೇಕಾದ ಶೀಲ ಮತ್ತು ಸದಾಚಾರಗಳು ಉಂಟಾಗದಿದ್ದರೆ ಅವನಲ್ಲಿ ಪ್ರಬಲವಾಗಿ ವರ್ಣಸಂಕರತೆ ಇದೆಯೆಂದು ತಿಳಿಯಬೇಕೆಂಬುದು ನನ್ನ ವಿಚಾರವು.

ಯತ್ರೇದಾನೀಂ ಮಹಾಸರ್ಪ ಸಂಸ್ಕೃತಂ ವೃತ್ತಮಿಷ್ಯತೇ।
ತಂ ಬ್ರಾಹ್ಮಣಮಹಂ ಪೂರ್ವಮುಕ್ತವಾನ್ ಭುಜಗೋತ್ತಮ ॥ ೩೭ ॥

ಭುಜಂಗಮಶ್ರೇಷ್ಠನೆ! ಈ ಕಾಲದಲ್ಲಿ ಯಾರಲ್ಲಿ ಸಂಸ್ಕಾರ ಮತ್ತು ಸದಾಚಾರ ಇವೆರಡೂ ಯುಕ್ತವಾಗಿವೆಯೋ ಅವನು ಬ್ರಾಹ್ಮಣನು ಈ ಮಾತನ್ನು ಆರಂಭದಲ್ಲಿಯೇ ಹೇಳಿರುವೆನು."

ಅಜಗರನು, "ನೀನು ವಿಧಿತವೇದ್ಯನು; ಎಲ್ಲಾ ಶಸ್ತ್ರಗಳನ್ನು ತಿಳಿದಮಹಾ ಪ್ರಾಜ್ಞನಾಗಿರುವಿ. ನನ್ನ ಪ್ರಶ್ನೆಗಳಿಗೆ ಉತ್ತಮವಾದ ಉತ್ತರವನ್ನಿತ್ತಿರುವಿ. ಹೀಗಿರುವಾಗ ನಿನ್ನ ತಮ್ಮ ಭೀಮಸೇನನನ್ನು ನಾನು ಹೇಗೆ ತಿನ್ನಲಿ!" ಈ ಪ್ರಕಾರ ನುಡಿಯಲಾಗಿ ಧರ್ಮರಾಯನು ಅವನೊಡನೆ ಈ ಪ್ರಶ್ನೆಯನ್ನಿಟ್ಟನು.

"ನೀನು ಸಂಪೂರ್ಣ ವೇದ ವೇದಾಂಗಗಳನ್ನು ತಿಳಿದ ಪ್ರಾಜ್ಞನೆಂದು ನನಗನ್ನಿಸಿದೆ. ಆದರಿಂದ ಯಾವ ಕರ್ಮಾಚಾರದಿಂದ ಸರ್ವೋತ್ತಮ ಗತಿಯು ಮಾನವನಿಗೆ ಪ್ರಾಪ್ತವಾಗುವುದೆಂದು ಹೇಳಬೇಕೆಂದು ಕೋರುತ್ತೇನೆ."

ಸರ್ಪರಾಜನು ಹೀಗೆಂದನು.

ಪಾತ್ರೇ ದತ್ವಾ ಪ್ರಿಯಾಣ್ಯುಕ್ತ್ವಾ ಸತ್ಯಮುಕ್ತ್ವಾ ಚ ಭಾರತ।
ಅಹಿಂಸಾ ನಿರತಃ ಸ್ವರ್ಗಂ ಗಚ್ಛೇದಿತಿ ಮತಿರ್ಮಮ ॥ ೧೮೧-೨ ॥

"ಭಾರತ! ಸತ್ಪಾತ್ರಕ್ಕೆ ದಾನವನ್ನು ಕೊಡುವುದರಿಂದ, ಸತ್ಯ ಮತ್ತು ಪ್ರಿಯ ವಚನಗಳನ್ನಾಡುವುದರಿಂದ ಮತ್ತು ಅಹಿಂಸಾ ಧರ್ಮದಲ್ಲಿ ತತ್ಪರನಾಗುವುದರಿಂದ ಉತ್ತಮಗತಿ (ಸ್ವರ್ಗಪ್ರಾಪ್ತಿ) ಯು ಆಗುವುದೆಂದು ನನ್ನ ಮತವು.

"ಹಾಗಾದರೆ ನಾಗರಾಜ! ದಾನ ಮತ್ತು ಸತ್ಯ ಇವುಗಳಲ್ಲಿ ಹೆಚ್ಚಿನದಾವುದು? ಅಹಿಂಸಾ ಮತ್ತು ಪ್ರಿಯಭಾಷಣ ಇವುಗಳಲ್ಲಿ ಯಾವುದಕ್ಕೆ ಅಧಿಕ ಮಹತ್ವವು?"

ಈ ಧರ್ಮರಾಯನ ಪ್ರಶ್ನೆಗೆ ಅಜಗರನು ಇಂತೆಂದನು. "ಮಹಾರಾಜ! ದಾನ, ಸತ್ಯ, ಅಹಿಂಸಾ ಮತ್ತು ಪ್ರಿಯ ಭಾಷಣ ಇವುಗಳು ಗುರು ಯಾವುದು ಲಘು ಯಾವುದು ಎಂಬುದು ಕಾರ್ಯದ ಮಹತ್ವವನ್ನು ಅನುಸರಿಸಿ ಇದೆ. ಯಾವ ದಾನದಿಂದ ಸತ್ಯದ ಮಹತ್ವವು ಆಗುವುದೋ, ಯಾವ ಯಾವ ದಾನವು ಸತ್ಯಭಾಷಣದಿಂದ ಅಧಿಕ ಮಹತ್ವ ಪಡೆಯುವುದೋ ಆ ದಾನವೇ ಮಹತ್ವ ಎಂದು ತಿಳಿಯಬೇಕು. ಹಾಗೆಯೇ ಯಾವ ವಚನದಿಂದ ಅಹಿಂಸೆಗೆ ಬರುವುದೋ ಅದೇ ಮಹತ್ವವು. ಅಹಿಂಸೆಗಿಂತ ಪ್ರಿಯ ಮಾತುಗಳು ಕೆಲವು ಪ್ರಸಂಗದಲ್ಲಿ ಮಹತ್ವದ್ದೆಂದು ದೃಷ್ಟಿಗೋಚರವಾಗುತ್ತದೆ. ಹೀಗೆ ಗೌರವಲಾಘವವನ್ನು ಕಾರ್ಯಗಳ ಸಂದರ್ಭಗಳಿಂದ ನಿಶ್ಚಯಿಸಬೇಕಷ್ಟೆ.

ಆ ಮೇಲೆ ಈ ವಿಚಾರ ಕೆಲವು ಪ್ರಶ್ನೆಗಳನ್ನು ಕೇಳಿ ಅಜಗರನು ಕೊಟ್ಟ ಉತ್ತರದಿಂದ ಸಂತುಷ್ಟನಾಗಿ ಯುಧಿಷ್ಠಿರನು ಈ ಪ್ರಶ್ನೆಯನ್ನು ಮುಂದಿಟ್ಟನು.

"ಸರ್ಪ!....ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳೆಂಬ ಈ ಪಂಚತತ್ವಗಳೇನು ಆಧಾರ? ಎಲ್ಲಾ ವಿಷಯಗಳನ್ನು ಪಂಚಜ್ಞಾನೇಂದ್ರಿಯಗಳು ಏಕಕಾಲದಲ್ಲಿ ಮನಸ್ಸು ಏಕೆ ಗ್ರಹಣ ಮಾಡುವುದಿಲ್ಲ? ದಯವಿಟ್ಟು ಈ ವಿಚಾರಗಳನ್ನು ಬಗೆಹರಿಸಬೇಕು, ಸರ್ಪರಾಜನೇ."

ಸರ್ಪರಾಜನು, "ಆಯುಷ್ಮಂತನೇ! ಅವಧರಿಸು! ಸ್ಥೂಲ, ಸೂಕ್ಷ್ಮ ಮತ್ತು ಕಾರಣಗಳೆಂಬ ಮೂರು ಶರೀರಗಳು ಮತ್ತು ಪಂಚೇಂದ್ರಿಯಗಳು ಇವುಗಳನ್ನು ಧರಿಸಿರುವ ಜೀವಾತ್ಮನಿಗೆ ದ್ರವ್ಯವೆಂಬ ಹೆಸರಿದೆ. ವಿಧಿಪೂರ್ವಕ-ಎಂದರೆ ಪೂರ್ವಜನ್ಮದ ಸಂಸ್ಕಾರಾನುಸಾರವಾಗಿ ಜೀವನು ನಾನಾಪ್ರಕಾರದ ಭೋಗಗಳನ್ನು ಅನುಭವಿಸುವನು.

ಜ್ಞಾನಂ ಚೈವಾತ್ರ ಬುದ್ಧಿಶ್ಚ ಮನಶ್ಚ ಭರತರ್ಷಭ।
ತಸ್ಯ ಭೋಗಾಧಿಕರಣೇ ಕರಣಾನಿ ನಿಬೋಧ ಮೇ ॥ ೧೯ ॥

ಭರತಶ್ರೇಷ್ಠ! ಜ್ಞಾನ, ಬುದ್ಧಿ ಮತ್ತು ಮನಸ್ಸು-ಇವು ಮೂರು ಇರುವ ಶರೀರವನ್ನು ಕಾರಣಶರೀರವೆಂದು ಕರೆಯುತ್ತಾರೆ

ಮನಸಾ ತಾತ ಪರ್ಯೇತಿ ಕ್ರಮಶೋ ವಿಷಯಾನಿಮಾನ್।
ವಿಷಯಾಯತನಸ್ಥೋ ಹಿ ಭೂತಾತ್ಮಾ ಕ್ಷೇತ್ರಮಾಸ್ಥಿತಃ ॥ ೨೦ ॥

"ತಾತ! ಪಂಚವಿಷಯಗಳ ಆಧಾರಭೂತವಾದ ಪಂಚಭೂತಗಳಿಂದಾದ ಶರೀರವು ಸ್ಥೂಲಶರೀರವೆಂದು ಕರೆಯಲ್ಪಡುತ್ತದೆ. ಈ ಶರೀರದಲ್ಲಿ ನೆಲಸಿರುವ ಜೀವಾತ್ಮನು ಮನಸ್ಸಿನ ದ್ವಾರ, ಶಬ್ದ, ಸ್ಪರ್ಶ, ರೂಪ, ರಸ, ಮತ್ತು ಗಂಧಗಳೆಂಬ ಪಂಚವಿಷಯಗಳನ್ನು ಅನುಭವಿಸುತ್ತಾನೆ.

ತತ್ರ ಚಾಪಿ ನರವ್ಯಾಘ್ರ ಮನೋ ಜಂತೋರ್ವಿಧೀಯತೇ।
ತಸ್ಮಾದ್ ಯುಗಪದತ್ರಾಸ್ಯ ಗ್ರಹಣಂ ನೋಪಪದ್ಯತೇ ॥ ೨೧ ॥

ಮನಸ್ಸು ಏಕಕಾಲದಲ್ಲಿ ಒಂದೊಂದೇ ವಿಷಯವನ್ನು ಮಾತ್ರ ಗ್ರಹಿಸಬಲ್ಲುದು.

[8ನೇ ಪುಟಕ್ಕೆ ಮುಂದುವರಿದಿದೆ]

ಪ್ರಭಾತ

ಸಂಪುಟ: ೨೮. ಸಂಚಿಕೆ: ೪೯. 13–1–1963 Vol. XXVIII. No. 49.

ಎಚ್ಚರಗೇಡಿಯಾದ

ನಿಮ್ಮ ನುಡಿ

ಶತ್ರುವಿನ ಗುಪ್ತ ಶಸ್ತ್ರ

ಹಾಸನ-ಮಂಗಳೂರು ರೈಲು ದಾರಿ

ನಮ್ಮ ಮಂತ್ರಿಗಳು ಹಲವೊಮ್ಮೆ ಯೋಗ್ಯ ಮಾತುಗಳನ್ನು ಆಡುತ್ತಾರೆ, ನಿರ್ಧಾರಗಳನ್ನು ಮಾಡುತ್ತಾರೆ. ಅನೇಕ ವೇಳೆ ಅವರ ಮಾತುಗಳ ಮತ್ತು ಕೃತಿ ನಡುವೆ, ಹಾಗೂ ನಿರ್ಧಾರಗಳ ಮತ್ತವುಗಳನ್ನು ಕಾರ್ಯಗತಗೊಳಿಸುವುದರ ನಡುವೆ ವ್ಯತ್ಯಾಸಗಳು ಕಂಡುಬರುತ್ತವೆ. ಇಂಥ ವ್ಯತ್ಯಾಸಗಳ ಬಗ್ಗೆ ಅವರು ಕೆಲವೊಮ್ಮೆ "ಕಾರಣ"ಗಳನ್ನು ನೀಡುತ್ತಾರೆ. ಇದೆಲ್ಲದರಿಂದ ಜನತೆಯು ವಿಸ್ಮಯಪಡುತ್ತದೆ, ಅವರ "ಕಾರಣ"ಗಳನ್ನು "ನೆವನ"ಗಳೆಂದು ತಿಳಿಯುತ್ತದೆ ಮತ್ತು ಜನತೆಯ ದೃಷ್ಟಿಯಲ್ಲಿ ಅವರ ಪ್ರತಿಷ್ಠೆಯು ಕುಂದುತ್ತದೆ.

ಕೇಂದ್ರದ ರೈಲ್ವೇ ಖಾತೆಯ ಉಪಮಂತ್ರಿ, ಶ್ರೀ। ಎಸ್. ವಿ. ರಾಮಸ್ವಾಮಿಯವರು ಕಳೆದ ತಾ. 2ರಂದು ಬೆಂಗಳೂರಲ್ಲಿ ಪತ್ರಿಕಾಕಾರರೊಡನೆ ಮಾತಾಡುತ್ತ, ರೈಲ್ವೇ ಸೌಕರ್ಯಗಳನ್ನು ಒದಗಿಸುವುದರ ಮತ್ತು ಹೊಸ ದಾರಿಗಳನ್ನು ಹಾಕುವುದರ ಸಂಬಂಧದಲ್ಲಿ ಮೈಸೂರು ರಾಜ್ಯವನ್ನು ನಿರ್ಲಕ್ಷಿಸಲಾಗಿಲ್ಲವೆಂದೂ ಮೈಸೂರನ್ನು ಇತರ ರಾಜ್ಯಗಳ ಸಮಾನತೆಯಲ್ಲೇ ಕಾಣಲಾಗಿದೆಯೆಂದೂ ಪ್ರತಿಪಾದಿಸಿದರು. ನಮ್ಮ ನೆರೆಹೊರೆಯ ರಾಜ್ಯಗಳಾಗಿರುವ ಆಂಧ್ರ ಪ್ರದೇಶ ಮತ್ತು ಮದ್ರಾಸುಗಳಲ್ಲಿ ಕೆಲವಾದರೂ ಸೌಕರ್ಯಗಳನ್ನು ಒದಗಿಸಿರುವುದೂ, ಸುಧಾರಣೆಗಳನ್ನು ಮಾಡಿರುವುದೂ ಜನತೆಗೆ ತಿಳಿದಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯ ಕಾಲದಿಂದ ಇಷ್ಟರ ವರೆಗೆ ಮೈಸೂರು ರಾಜ್ಯದಲ್ಲಿ ಒಂದಾದರೂ ಹೊಸ ರೈಲ್ ದಾರಿಯನ್ನು ಹಾಕಿಲ್ಲ. ಬೇರೆ ಯಾವುದೇ ಸೌಕರ್ಯಗಳನ್ನು ರೈಲ್ವೇ ಖಾತೆಯು ಒದಗಿಸಿದ್ದರೆ, ಅದು ಜನತೆಗೆ ಇನ್ನು ತಿಳಿದುಬರಬೇಕಾಗಿದೆ.

ಮೈಸೂರು ಸರಕಾರವು ಈ ರಾಜ್ಯದಲ್ಲಿ ಕೆಲವು ಹೊಸ ರೈಲ್ ದಾರಿಗಳನ್ನು ಹಾಕಬೇಕೆಂದು ಕೇಳಿಕೊಳ್ಳುತ್ತ ಬಂದಿದೆ. ಇವುಗಳಲ್ಲಿ ಹಾಸನ-ಮಂಗಳೂರು ರೈಲ್ವೆ ದಾರಿಯು ಹೆಚ್ಚು ಮುಖ್ಯವಾದುದು. ಈ ರಾಜ್ಯದ ಕಬ್ಬಿಣ ಮತ್ತಿತರ ಅದುರುಗಳ ನಿರ್ಯಾತದ ಬಗ್ಗೆ ಈ ದಾರಿಯು ಅತ್ಯಗತ್ಯವಾಗಿದೆ. ಈಗ ಈ ನಿರ್ಯಾತವನ್ನು ನೆರೆಹೊರೆಯ ಮದ್ರಾಸ್ ರಾಜ್ಯದ ಬಂದರುಗಳ ಮುಖಾಂತರವೇ ಮಾಡಬೇಕಾಗಿದ್ದು, ಕ್ರಮೇಣ ಈ ಕೈಗಾರಿಕೆಯೇ ಕುಂಠಿತಗೊಳ್ಳುವ ಭೀತಿಯಿದೆ. ಬ್ರೋಡ್ ಗೇಜಿನ ಉಪಯುಕ್ತತೆಯನ್ನೂ ಅವಶ್ಯಕತೆಯನ್ನೂ ಗ್ರಹಿಸಿಕೊಂಡಿರುವ ಮೈಸೂರಿನ ಮುಖ್ಯ ಮಂತ್ರಿ, ಶ್ರೀ। ಎಸ್. ನಿಜಲಿಂಗಪ್ಪನವರು, ಈ ದಾರಿಯನ್ನು ಯೋಜಿಸಲಾಗಿರುವಂತೆ ಮೀಟರ್ ಗೇಜಿನಲ್ಲಿ ಹಾಕುವ ಬದಲಿಗೆ ಬ್ರೋಡ್ ಗೇಜಿನಲ್ಲಿ ಹಾಕುವಂತೆ ಪ್ರಯತ್ನಿಸಬೇಕೆಂದು ನಾವು ನಮ್ಮ ಕಳೆದ ತಾ.30-12-1962ರ ಸಂಚಿಕೆಯಲ್ಲಿ ಬರೆದಿದ್ದೆವು.

ಅದೇ ದಿನ ಕನ್ಯಾಕುಮಾರಿಯಲ್ಲಿ ಕೇಂದ್ರದ ಗೃಹಮಂತ್ರಿ ಶ್ರೀ। ಲಾಲ ಬಹದೂರ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದ ದಕ್ಷಿಣ ವಲಯ ಮಂಡಲದ ಸಭೆಯಲ್ಲಿ, ರೈಲ್ವೇ ಉಪಮಂತ್ರಿ ಶ್ರೀ। ಎಸ್. ವಿ. ರಾಮಸ್ವಾಮಿಯವರು, ಹೊಸ ರೈಲ್ ದಾರಿಗಳನ್ನು ಒದಗಿಸುವುದರ ಕುರಿತು ಮಾತನಾಡಿದ ನಂತರ, ಸಭೆಯು ಪ್ರತಿಯೊಂದು ದೊಡ್ಡ ಬಂದರಕ್ಕೂ ಬ್ರೋಡ್ ಗೇಜ್ ರೈಲ್ ದಾರಿಯನ್ನು ಜೋಡಿಸಬೇಕೆಂದು ಶಿಫಾರಸು ಮಾಡಿತು. ಇದು ಯೋಗ್ಯವಾಗಿದ್ದು, ಶ್ರೀ। ನಿಜಲಿಂಗಪ್ಪನವರು ಸೂಚಿಸಿದ್ದಂತೆ ರಾಜ್ಯದಲ್ಲಿಯ ಅದುರುಗಳನ್ನು ಸಾಗಿಸುವ ಕೆಲವು ಮೀಟರ್ ಗೇಜ್ ದಾರಿಗಳನ್ನು ಬ್ರೋಡ್ ಗೇಜಿಗೆ ಪರಿವರ್ತಿಸಲಾಗುವುದೆಂಬ, ಹಾಗೂ ಹಾಸನ-ಮಂಗಳೂರು ದಾರಿಯನ್ನು ಬ್ರೋಡ್ ಗೇಜಿನಲ್ಲೇ ಹಾಕಲಾಗುವುದೆಂಬ ಆಶೆಯು ಹುಟ್ಟಿತು. ಆದರೆ ಅದು ಅಲ್ಪಕಾಲದ್ದಾಯಿತು!

ಪುಣೆಯಿಂದ ಮೀರಜಿನ ವರೆಗೆ ರೈಲ್ ದಾರಿಯನ್ನು ಬ್ರೋಡ್ ಗೇಜಿಗೆ ಮೇಲ್ಪಡಿಸಲಾದುದನ್ನು ಹುಬ್ಬಳಿಯ ವರೆಗೂ ಮುಂದುವರಿಸಬೇಕೆಂಬ ಮೈಸೂರು ಸರಕಾರದ ಕೇಳಿಕೆಯು ಆರ್ಥಿಕವಾಗಿ ಅಸಾಧ್ಯವಾಗಿದೆಯೆಂದು ಶ್ರೀ ರಾಮಸ್ವಾಮಿಯವರು ಕಳೆದ ತಾ. 2ರಂದು ಬೆಂಗಳೂರಿನಲ್ಲಿ ಹೇಳಿದರು. ಗುಂಟಕಲ್-ಹೊಸಪೇಟೆ ದಾರಿಯನ್ನು ಇದೇ ರೀತಿ ಮೇಲ್ಪಡಿಸಬೇಕೆಂಬ ಮೈಸೂರು ಸರಕಾರದ ಇನ್ನೊಂದು ಕೇಳಿಕೆಯೂ ಅಸಾಧ್ಯವೆಂದು ಅವರು ಹೇಳಿದ್ದಾರೆ.

ದಕ್ಷಿಣ ವಲಯ ಮಂಡಲದ ಸಭೆಯಲ್ಲಿ ಭಾಗವಹಿಸಿ ಬೆಂಗಳೂರಿಗೆ ಮರಳಿದ ಶ್ರೀ। ನಿಜಲಿಂಗಪ್ಪನವರು ಪತ್ರಿಕಾಕಾರರೊಡನೆ ಮಾತಾಡುತ್ತ, ಯೋಜಿಸಲಾಗಿರುವ ಹಾಸನ-ಮಂಗಳೂರು ರೈಲ್ ದಾರಿಯು ಸದ್ಯಕ್ಕೆ ಮೀಟರ್ ಗೇಜಿನದ್ದೇ ಆದರೂ, ಅದರ ವಿನ್ಯಾಸವು (lay-out) ಬ್ರೋಡ ಗೇಜ್ ಮಾದರಿಯದ್ದಾಗುವುದು, ಎಂದು ಹೇಳಿದರು. ಈ ದಾರಿಯನ್ನು ಭವಿಷ್ಯದಲ್ಲಿ ಬ್ರೋಡ್ ಗೇಜಿಗೆ ಪರಿವರ್ತಿಸಲು ಈ ವಿನ್ಯಾಸದಲ್ಲಿ ಅನುಕೂಲವಿದೆಯೆಂದು ರೈಲ್ವೇ ಅಧಿಕಾರಿಗಳು ತನಗೆ ತಿಳಿಸಿದ್ದಾರೆಂದು ಅವರು ವಿವರಿಸಿದರು. ಬ್ರೋಡ್ ಗೇಜಿನ ಉಪಯುಕ್ತತೆಯನ್ನೂ ಅವಶ್ಯಕತೆಯನ್ನೂ ಗ್ರಹಿಸಿಕೊಂಡಿರುವ ಮತ್ತು ಆ ಬಗ್ಗೆ ಈ ವಿನ್ಯಾಸದಲ್ಲಿ ಅನುಕೂಲಮಾಡಿಕೊಳ್ಳುವ ಈ ಅಧಿಕಾರಿಗಳು, ಈ ದಾರಿಯನ್ನು ಬ್ರೋಡ್ ಗೇಜಿನಲ್ಲಿ ಹಾಕುವ ಬದಲಿಗೆ ಮೀಟರ್ ಗೇಜಿನಲ್ಲೇ ಹಾಕಲು ಏಕೆ ಉದ್ಯುಕ್ತರಾಗಿದ್ದಾರೆಂದು ತಿಳಿಯುವುದಿಲ್ಲ.

ಹಾಗಿದ್ದರೂ ಶ್ರೀ। ಎಸ್. ವಿ. ರಾಮಸ್ವಾಮಿಯವರು ಹೇಳಿದ ಕೆಲವು ಮಾತುಗಳು ಈಗಿನ ಸ್ಥಿತಿಯಲ್ಲಿ ಸಾಕಷ್ಟು ಆಶಾದಾಯಕವಾಗಿವೆ. ಹಾಸನ-ಮಂಗಳೂರು ರೈಲ್ ದಾರಿಯ ಯೋಜನೆಯನ್ನು ಸದ್ಯದ ತುರ್ತು ಪರಿಸ್ಥಿತಿಯ ಕಾರಣದಿಂದ ಮೂಲೆಗೆ ಹಾಕಲಾಗುವುದಿಲ್ಲವೆಂದು ಅವರು ನಿರುಪಾಧಿಕವಾಗಿ ಹೇಳಿದರು. ಕೆಲವೊಂದು ಕಾರಣಗಳಿಂದ ಅದರ ಕೆಲಸದ ಗತಿಯು ಸ್ವಲ್ಪ ಮಟ್ಟಿಗೆ ನಿಧಾನವಾಗಬಹುದೆಂದೂ ಈ ತುರ್ತು ಪರಿಸ್ಥಿತಿಯಲ್ಲಿ ಅಂಥ ವಿಳಂಬವು ಅನಿವಾರ್ಯವೆಂದೂ ಅವರು ಹೇಳಿದರು. ಮೊದಲು ಈ ದಾರಿಯ ಯೋಜನೆಯನ್ನು ಮಂಗಳೂರು ಬಂದರದ ಯೋಜನೆಯೊಡನೆ ಜೋಡಿಸಲಾಗಿತ್ತೆಂದೂ, ಬಂದರದ ಕುರಿತು ಒಂದು ನಿರ್ಧಾರಕ್ಕೆ ಬರಲು ಯೋಜನಾ ಆಯೋಗಕ್ಕೆ ಸ್ವಲ್ಪ ಸಮಯ ಬೇಕಾಯಿತೆಂದೂ, ಅಗತ್ಯದ ಶಿಫಾರಸು ಪತ್ರವನ್ನು ಇತ್ತೀಚೆಗೆ ಮಾತ್ರ ಕೊಡಲಾಯಿತೆಂದೂ, ಕೂಡಲೇ ಸ್ಥಳ ನಿರ್ದೇಶಿಸುವ ಸರ್ವೇಗೆ ಹುಕುಮು ಕೊಡಲಾಯಿತೆಂದೂ, ಈ ಸರ್ವೇ ಕೆಲಸವು ಹಾಸನ ಜಿಲ್ಲೆಯಲ್ಲಿ ಹಾಸನದಿಂದ ಸಕಲೇಶಪುರದ ವರೆಗೆ ಈಗಾಗಲೇ ಪೂರ್ಣವಾಗಿದೆಯೆಂದೂ ಅವರು ವಿವರಿಸಿದರು. ಇಂದಿನ ಪರಿಸ್ಥಿತಿಯಲ್ಲಿ ಜನತೆಯು ಇಷ್ಟರಿಂದಲೇ ತೃಪ್ತಿಪಡಬೇಕಾಗಿದೆ.

* * * * * * * * *

ವಿಷಾದಕರ

ಚೀನವು ಮಾಡಿರುವ ಆಕ್ರಮಣದಿಂದ ಉಂಟಾಗಿರುವ ವಿಷಮ ಪರಿಸ್ಥಿತಿಯ ಕಾರಣದಿಂದ ದೇಶದಲ್ಲಿಯ ಭಾಷಾ, ಪ್ರಾಂತೀಯತಾ ವಿವಾದಗಳು ಕಡಿಮೆಯಾಗಿರುವಾಗ, ಅಖಿಲ ಗೋವೆ ಮರಾಠೀ ಸಾಹಿತ್ಯ ಸಮ್ಮೇಳನವು ಕೆಲವು ದಿನಗಳ ಹಿಂದೆ, ಗೋವೆಯ ಭಾಷಾ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಪ್ರಗತಿಗಾಗಿ ಗೋವೆಯನ್ನು ಸಾಧ್ಯವಿದ್ದಷ್ಟು ಬೇಗನೆ ಮಹಾರಾಷ್ಟ್ರದೊಡನೆ ವಿಲೀನಮಾಡಬೇಕೆಂಬ ಠರಾವನ್ನು ಮಂಜೂರುಮಾಡಿರುವುದು ವಿಷಾದಕರವಾಗಿದೆ.

ಈ ಠರಾವು "ಸರ್ವಾನುಮತದಿಂದ" ಮಂಜೂರಾಯಿತೆಂದೂ, ಕೊಂಕಣಿ ಭಾಷೆಯು ಮರಾಠೀ ಭಾಷೆಯದ್ದೇ ಉಪಭಾಷೆಯೆಂದು ಸಮ್ಮೇಳನವು ಅಭಿಪ್ರಾಯಪಟ್ಟಿದೆಯೆಂದೂ ವರದಿಯಾಗಿದೆ. ಆದರೆ ಅದೇ ವರದಿಯಂತೆ, ಕೊಂಕಣಿ ಭಾಷೆಯ ಹಲವು ಪ್ರತಿನಿಧಿಗಳು ಈ ಠರಾವಿಗೆ ತಮ್ಮ ತೀವ್ರ ವಿರೋಧವನ್ನು ವ್ಯಕ್ತಪಡಿಸಿದ್ದರು, ಮಾತ್ರವಲ್ಲದೆ ಉಳಿದವರು ಮರಾಠೀ-ವಿರೋಧ ಗುರಿ ನುಡಿಗಳನ್ನು ಕೂಗುತ್ತಲೇ ಇದ್ದರು!

ಇದೆಲ್ಲ ಸಮ್ಮೇಳನದಲ್ಲಿ ನಡೆದಿದ್ದರೆ, ಅದರ ಹೊರಗೆ, ನಗರದಲ್ಲಿ ಕೊಂಕಣಿವಾದಿಗಳು ಒಂದು ದೊಡ್ಡ ಮೆರವಣಿಗೆಯನ್ನು ಜರಗಿಸಿ, ಮಹಾರಾಷ್ಟ್ರೀಯರನ್ನೂ ಮರಾಠೀವಾದಿಗಳನ್ನೂ ಖಂಡಿಸುವ ಘೋಷಣೆಗಳಿಂದ ನಗರದಲ್ಲಿ ಸುತ್ತಾಡಿದರೆಂದು ಸಹ ವರದಿಯಾಗಿದೆ.

ಚೀನದ ಆಕ್ರಮಣದಿಂದ ದೇಶಕ್ಕೆ ಉಂಟಾಗಿರುವ ಅಪಾಯವನ್ನು ಎದುರಿಸಲು ದೇಶದಲ್ಲಿ ಐಕ್ಯತೆಯನ್ನುಂಟುಮಾಡುವ ಅವಶ್ಯಕತೆಯಾದರೂ ಸಮ್ಮೇಳನಕ್ಕೆ ತಿಳಿದೇ ಇದೆಯೆಂಬುದು, ಸಮ್ಮೇಳನವು ಮಂಜೂರು ಮಾಡಿರುವ ಇನ್ನೊಂದು ಠರಾವಿನಿಂದ ಸ್ಪಷ್ಟವಾಗುತ್ತದೆ. ಇಂಥ ಐಕ್ಯವನ್ನು ಸಾಧಿಸುವುದಕ್ಕೆ ಈ ವಿಲೀನೀಕರಣದ ಠರಾವು ಒಂದು ದೊಡ್ಡ ಆತಂಕವಾಗಿದೆಯೆಂಬುದನ್ನು ಸಮ್ಮೇಳನವು ಗ್ರಹಿಸಿಕೊಳ್ಳದಿದ್ದುದೂ, ಇದರಲ್ಲಿ ಪಂಜಾಬಿನ ಮಾಜಿ ಗವರ್ನರರಾದ ಶ್ರೀ। ಎನ್. ವಿ. ಗಾಡ್ಗೀಲ, ಶ್ರೀ। ಪಿ. ಕೆ. ಅತ್ರೆಯವರಂಥ ಮಹಾರಾಷ್ಟ್ರೀಯರು ಭಾಗವಹಿಸಿದ್ದರೆಂಬುದೂ ತೀರ ವಿಷಾದಕರವಾಗಿದೆ. ಅದೇ ಸಮಯದಲ್ಲಿ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಸಂಘ-ಸಂಸ್ಥೆಗಳು ರಾಜಕೀಯ ವಿಷಯಗಳಲ್ಲಿ ಕೈಹಾಕುವುದು ಅನುಚಿತವೆಂಬ ವಾದಕ್ಕೆ ಮತ್ತೆ ಪುಷ್ಟಿ ದೊರೆಯುವಂತಾಗಿದೆ.

ಗೋವೆಯ ಭವಿಷ್ಯವನ್ನು ನಿರ್ಧರಿಸಲು ಗೋವೆಯ ಜನರಿಗೆ ಪೂರ್ಣ ಅವಕಾಶವನ್ನು ಕೊಡಲಾಗುವುದೆಂಬುದನ್ನು ಪದೇ ಪದೇ ಒತ್ತಿಹೇಳಲಾಗಿದೆ. ಗೋವೆಗೆ ಈಗ ಅಗತ್ಯವಿರುವ ಆರ್ಥಿಕ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಅದು ಕೆಲವು ವರ್ಷಗಳ ವರೆಗೆ ಕೇಂದ್ರ ಸರಕಾರದ ಆಡಳಿತದಲ್ಲೇ ಉಳಿಯುವುದು ಉತ್ತಮವೂ ಅನಿವಾರ್ಯವೂ ಆಗಿದೆ. ಇದನ್ನು ಸಂಬಂಧಪಟ್ಟವರೆಲ್ಲರೂ ಗ್ರಹಿಸಿಕೊಳ್ಳುವುದು ಉಚಿತವಾಗಿದ್ದು, ಇದಕ್ಕೆ ಅಡ್ಡಿಯಾಗುವಂಥ ಚಟುವಟಿಕೆಗಳನ್ನು ಕೈಗೊಳ್ಳುವುದು ಹಾನಿಕರವಾಗಿದೆ.

* * * * * * * * *

ಚಿನ್ನದ ಸಂಗ್ರಹದ ಮೇಲೆ ನಿಯಂತ್ರಣ

ಬೇಡಿಕೆ ತಗ್ಗಿಸಲು ಸರಕಾರದ ನಿಬಂಧನೆಗಳು

ಭಾರತದ ಸಾವಿರಾರು ವರ್ಷಗಳ ಇತಿಹಾಸದಲ್ಲಿ ಇದೀಗ ಪ್ರಥಮ ಬಾರಿ, ಚಿನ್ನ ಸಂಗ್ರಹ ಮತ್ತು ಆಭರಣಗಳ ಮೇಲೆ ಸರಕಾರವು ಕಠಿನ ನಿರ್ಬಂಧಗಳನ್ನು ಇದೇ ತಾ. 9ರಲ್ಲಿ ಸಾರಿತು. ಕೇಂದ್ರದ ಅರ್ಥಸಚಿವ ಶ್ರೀ| ಮೊರಾರ್ಜಿ ದೇಸಾಯಿಯವರು ಬ್ರೊಡ್‌ಕಾಸ್ಟ್ ಭಾಷಣ ಮಾಡುತ್ತ, ಭಾರತ ರಕ್ಷಣಾ ಕಾಯಿದೆಯನ್ವಯ ರಚಿಸಿದ ಈ ಸ್ವರ್ಣನಿಯಂತ್ರಣ ನಿಬಂಧನೆಗಳನ್ನು ಸಾರಿದರು; ಜನತೆಯು ಸಹಕರಿಸಬೇಕೆಂದು ವಿನಂತಿಸಿದರು.

ತಾ. 10—1—63ರಿಂದ ಈ ನಿಯಂತ್ರಣವು ಜ್ಯಾರಿಗೆ ಬಂದಿತು. ಅಂದೇ, ಅಧಿಕಾರಿಗಳು, ಪ್ರತಿಯೊಂದು ಊರಿನಲ್ಲಂತೆ, ಸ್ವರ್ಣ ವ್ಯಾಪಾರಿಗಳಲ್ಲಿಗೆ ಹೋಗಿ, ಅವರ ಚಿನ್ನದ ಸ್ಟಾಕನ್ನೂ, ಆಭರಣಗಳ ಸ್ಟಾಕನ್ನೂ ದಾಖಲು ಮಾಡಿಕೊಂಡರು.

ಆಭರಣಗಳಿಗೆ 14 ಕೆರೆಟ್ ಚಿನ್ನ ಮಾತ್ರ ಉಪಯೋಗಿಸಬೇಕು

ಹೊಸ ನಿಬಂಧನೆಯಂತೆ, ಇನ್ನು ಮುಂದೆ, ಚಿನ್ನದ ಆಭರಣಗಳನ್ನು ಮಾಡಿಸುವವರು, 14 ಕೆರೆಟ್‌ಗಿಂತ ಹೆಚ್ಚಿನ ಶುದ್ಧತೆಯ ಚಿನ್ನದ ಆಭರಣಗಳನ್ನು ಮಾಡಿಸಬಾರದು, ಚಿನಿವಾರರು 14 ಕೆರೆಟ್‌ಗೂ ಮಿಕ್ಕಿದ ಚಿನ್ನದಿಂದ ಆಭರಣಗಳನ್ನು ಮಾಡಿಕೊಡಬಾರದು. (ನಮ್ಮ ದೇಶದ ಚಿನಿವಾರರು ಬಹು ಪೂರ್ವಕಾಲದಿಂದ, 22 ಅಥವಾ 24 ಕೆರೆಟ್‌ಗಿಂತ ಕಡಿಮೆಯಾಗದ ಚಿನ್ನದ ಆಭರಣಗಳನ್ನು ಮಾಡಿದವರಲ್ಲ, ನಮ್ಮ ಅಕ್ಕಸಾಲಿಗರು ಈಗ 14 ಕೆರೆಟ್ ಚಿನ್ನಕ್ಕೆ ಪರಿವರ್ತಿಸಿಕೊಳ್ಳುವದಕ್ಕೆ ಅಸಮರ್ಥರಾಗಿದ್ದಾರೆ. 14 ಕೆರೆಟ್ ಚಿನ್ನವು ತಗಡು ಬಡಿವುದಕ್ಕೆ ಕಷ್ಟಕರ; ಇದಕ್ಕೆ ಬೇರೆದ ಯಂತ್ರಗಳೇ ಅವಶ್ಯವಿವೆ.)

ಆಭರಣಗಳ ಹೊರತು, ಚಿನಿವಾರರು ಮಿಕ್ಕ ಯಾವ ವಸ್ತುವನ್ನೂ ಚಿನ್ನದಿಂದ ತಯಾರಿಸಬಾರದು. (ಸಿಗರೇಟ್ ಕೇಸ್, ಗುಂಡಿಗಳು ಇತ್ಯಾದಿ)

ಲೈಸೆನ್ಸ್ ಪಡಕೊಳ್ಳಬೇಕು

ಈ ಶಾಸನವು ಜ್ಯಾರಿಗೆ ಬಂದ ಒಂದು ತಿಂಗಳೊಳಗೆ, ಚಿನ್ನ ವ್ಯಾಪಾರಸ್ಥರು, ವ್ಯಾಪಾರದ ಬಗ್ಗೆ ಲೈಸೆನ್ಸ್ ಪಡಕೊಳ್ಳಬೇಕು. ಅವರು, ತಮ್ಮೊಡನೆ ಇರುವ ಚಿನ್ನ ಮತ್ತು ಎಲ್ಲ ಆಭರಣಗಳ ಲೆಕ್ಕವನ್ನೊಪ್ಪಿಸಬೇಕು, ಮತ್ತು ಇಂಥ ಲೆಕ್ಕವನ್ನು ಸರಕಾರವು ನಿರ್ದೇಶಿಸಿದ ಅವಧಿಗಳಿಗೆ ಒಪ್ಪಿಸತಕ್ಕದ್ದು.

ಈ ಶಾಸನ ಜ್ಯಾರಿಗೆ ಬಂದಂದಿನಿಂದ, ಲೈಸೆನ್ಸ್ ಇಲ್ಲದ ಯಾವನೂ, ಚಿನ್ನವನ್ನು ಪಡೆದುಕೊಳ್ಳಬಾರದು. ಚಿನ್ನವನ್ನು ಮಾರುವವರು ಕೂಡ, ಲೈಸೆನ್ಸ್ ಹೊಂದಿದವರಿಗೆ ಮಾತ್ರ ಮಾರಾಟ ಮಾಡಬೇಕು.

ಚಿನ್ನವನ್ನು ಶುದ್ಧಿಕರಿಸುವ ರಿಫೈನರಿಗಳೂ ಲೈಸೆನ್ಸ್ ಪಡಕೊಳ್ಳತಕ್ಕದ್ದು. ಚಿನ್ನ ವ್ಯಾಪಾರಿಗಳೂ ರಿಫೈನರಿಗಳೂ ಲೈಸೆನ್ಸ್ ಬಗ್ಗೆ (ವಾರ್ಷಿಕ ಫೀ) ನೂರು ರೂಪಾಯಿ ತೆರಬೇಕಾಗುವುದು. ಲೈಸೆನ್ಸ್ ಬಗ್ಗೆ ಮಾಡಿದ ಅರ್ಜಿಯನ್ನು ಅಧಿಕಾರಿಗಳು ಮಂಜೂರು ಮಾಡುವ ಅಥವಾ ನಿರಾಕರಿಸುವ ತನಕ ವ್ಯಾಪಾರಸ್ಥರೂ ರಿಫೈನರಿಗಳೂ ತಮ್ಮ ವೃತ್ತಿಯನ್ನು ನಡೆಸಬಹುದು. ಈ ನಿಯಂತ್ರಣ ಸಂಬಂಧವಾಗಿ ಸರಕಾರವು "ಗೋಲ್ಡ್ ಬೋರ್ಡ್"ನ್ನು ರಚಿಸಿದೆ.

ಚಿನ್ನ ಶುದ್ಧೀಕರಿಸುವ ರಿಫೈನರಿಯವರು ಅಥವಾ ಚಿನ್ನ ವ್ಯಾಪಾರಸ್ಥರು, ಲೈಸೆನ್ಸ್ ಪಡಕೊಳ್ಳದಿದ್ದರೆ ಅಥವಾ ತಕ್ಕ ಕಾರಣದಿಂದ ಅಂಥವರಿಗೆ ಲೈಸೆನ್ಸ್ ನಿರಾಕರಿಸಲ್ಪಟ್ಟರೆ, ಅವರು ತಮ್ಮ ಆ ದಂಧೆಯನ್ನು ಕೊನೆಗೊಳಿಸಿ, ತಮ್ಮೊಡನೆ ಇರುವ ಚಿನ್ನದ ಸ್ಟಾಕನ್ನು ಕೇಂದ್ರ ಸರಕಾರಕ್ಕೊಪ್ಪಿಸಬೇಕು; ಇದಕ್ಕೆ, ನಿರ್ಣಯವಾಗಿರುವ ಅಂತರ್ರಾಷ್ಟ್ರೀಯ ಧಾರಣೆ ತೆರಲ್ಪಡುವುದು.

ದೇವಸ್ಥಾನ, ಮಠ ಮೊದಲಾದುವು ಕೂಡ ಸ್ಟಾಕ್ ತಿಳಿಸಬೇಕು

ದೇವಸ್ಥಾನಗಳು, ಮಠಗಳು, ಧಾರ್ಮಿಕ ಸಂಸ್ಥೆಗಳು, ಸಂಘಗಳು, ಕಂಪೆನಿಗಳು, ಇತರ ಖಾಸಗಿ ವ್ಯಕ್ತಿಗಳು ಕೂಡ, ಆಭರಣಗಳ ಹೊರತು ಮಿಕ್ಕ ಚಿನ್ನದ ಸ್ಟೋರ್ ತಮ್ಮೊಡನೆ ಇದ್ದರೆ, ಈ ಶಾಸನ ಜ್ಯಾರಿಗೆ ಬಂದ 30 ದಿನಗಳೊಳಗೆ "ಗೋಲ್ಡ್ ಬೋರ್ಡ್"ಗೆ ಸ್ಟೋರ್ ತಿಳಿಸತಕ್ಕದ್ದು.

ನಿಬಂಧನೆ ಅನ್ವಯವಾಗದ ಮಿತಿ

ಒಬ್ಬ ಅಪ್ರಾಪ್ತವಯಸ್ಕನೊಡನೆ, 20 ಗ್ರೇಮಿಗೆ ಮೀರದಷ್ಟು ಮತ್ತು ಪ್ರಾಯಸ್ಥರೊಡನೆ 50 ಗ್ರೇಮಿಗೆ ಮೀರದಷ್ಟು ಚಿನ್ನವಿದ್ದರೆ ಮೇಲಿನ ನಿಬಂಧನೆಗಳು ಅನ್ವಯವಾಗುವುದಿಲ್ಲ.

ನಿಮ್ಮ ಸಮೀಪದ ಅಬಕಾರಿ ಆಫೀಸರರಿಗೆ ತಿಳಿಸಿರಿ

ಚಿನ್ನದ ಸ್ಟಾಕಿನ ಲೆಕ್ಕವನ್ನು, ತಮಗೆ ಸಮೀಪದ ಕೇಂದ್ರ ಅಬಕಾರಿ (Excise) ಆಫೀಸರರಿಗೆ ತಿಳಿಸತಕ್ಕದ್ದು. ಹೀಗೆ ಲೆಕ್ಕ ಕೊಟ್ಟನಂತರ, ಚಿನ್ನವನ್ನು ಮಾರುವುದಿದ್ದರೆ, ಲೈಸೆನ್ಸ್ ಪಡೆದವರಿಗೆ ಮಾತ್ರ ಮಾರತಕ್ಕದ್ದು.

ಚಿನ್ನದ ಮೇಲೆ ಸಾಲಗಳು

ಆಭರಣಗಳಲ್ಲದ ಇತರ ಚಿನ್ನದ ಸ್ಟಾಕನ್ನು ಅಧಿಕಾರಿಗಳಿಗೆ ಬರಹ ಮೂಲಕ ತಿಳಿಸದೆ, ಅದರ ಈಡಿನ ಮೇಲೆ ಸಾಲ ಪಡೆವುದಾಗಲೀ ಕೊಡುವುದಾಗಲೀ ಕಾನೂನು ಬಾಹಿರವಾಗಿರುತ್ತದೆ. ಜಾಹೀರು ಮಾಡದೆ ಇರುವಂಥ ಚಿನ್ನವು ಯಾರೊಡನೆ ಇರುತ್ತದೋ ಅವರೇ ಅದರ ಮಾಲಿಕರು ಎಂದು ತಿಳಿಯಲಾಗುವುದು.

ಆಭರಣಗಳು

14 ಕೆರೆಟ್‌ಗಿಂತ ಹೆಚ್ಚಿನ ಶುದ್ಧತೆಯ ಚಿನ್ನದ ಆಭರಣಗಳಿಗೆ ಒಪ್ಪ ಕೊಡಲಿಕ್ಕೆ ಅಥವಾ ದುರಸ್ತಿಪಡಿಸಲಿಕ್ಕೆ ಯಾವ ಚಿನ್ನದ ಕೆಲಸಗಾರ ಅಥವಾ ಚಿನಿವಾರನ ಬಳಿಗೂ ಕೊಂಡುಹೋಗಿ ಕೊಡಬಹುದು; ಹಾಗೆಯೇ 14 ಕೆರೆಟ್‌ಗೆ ಪರಿವರ್ತಿಸಲಿಕ್ಕೂ ಕೊಡಬಹುದು. ಇಂಥ ಆಭರಣಗಳನ್ನು ನೇರಾಗಿ ಖಾಸಗಿ ವ್ಯಕ್ತಿಗಳು ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಬಹುದು.

ಈ ಮೊದಲೇ ಮಾಡಿಸಿದ, 14 ಕೆರೆಟ್‌ಗಿಂತ ಹೆಚ್ಚು ಶುದ್ಧತೆಯ ಚಿನ್ನದ ಆಭರಣಗಳು, ಎಷ್ಟಿದ್ದರೂ, ಅವುಗಳ ಬಗ್ಗೆ ಅಧಿಕಾರಿಗಳಿಗೆ ತಿಳಿಸಬೇಕಾಗಿಲ್ಲ.

ಆದರೆ; ಈ ಶಾಸನವು ಜಾರಿಗೆ ಬಂದ ನಂತರ, ಯಾರೂ 14 ಕೆರೆಟ್‌ಗಿಂತ ಹೆಚ್ಚಿನ ಶುದ್ಧತೆಯ ಚಿನ್ನದ ಆಭರಣಗಳನ್ನು ಮಾಡಿಕೊಡಬಾರದು, ಮಾಡಿಸಬಾರದು.

ಈ ನಿಬಂಧನೆಯನ್ವಯ, ಕೆಲವು ಅಧಿಕಾರಿಗಳಿಗೆ, ಅವಶ್ಯಕವಿದ್ದಲ್ಲಿ, ಅಲ್ಲಲ್ಲಿಗೆ ಹೋಗಿ ಝಡ್ತಿ ನಡೆಸುವ ಮತ್ತು ಚಿನ್ನದ ಸ್ಟಾಕನ್ನು ವಶಪಡಿಸಿಕೊಳ್ಳುವ ಅಧಿಕಾರವೀಯಲಾಗಿದೆ.

ಮಂಗಳೂರಿನಲ್ಲಿ

ಮಂಗಳೂರಿನಲ್ಲಿ, ಈ ನಿಬಂಧನೆಗಳು ಜಾರಿಗೆ ಬಂದ ದಿನವೇ ಅಬಕಾರಿ ಅಧಿಕಾರಿಗಳು ಚಿನ್ನ-ಬೆಳ್ಳಿ ವ್ಯಾಪಾರಸ್ಥರಲ್ಲಿಗೆ ಹೋಗಿ, ಹೊಸ ಶಾಸನವನ್ನು ತಿಳಿಸಿ, ಸ್ಟಾಕನ್ನು ಬರೆದುಕೊಂಡರು. 14 ಕೆರೆಟ್ ಬಂಗಾರದ ಮಿತಿಯು ಸಾರಲ್ಪಟ್ಟುದರಿಂದ, ಇಲ್ಲಿಯ ಸುಮಾರು 800ಕ್ಕೆ ಮಿಕ್ಕಿದ ಚಿನ್ನದ ಕೆಲಸಗಾರರಿಗೆ ನಿರುದ್ಯೋಗದ ಭೀತಿ ತಟ್ಟಿದೆ. ಮಂಗಳೂರು ನಗರವು ಆಧುನಿಕ ಆಭರಣಗಳ ತಯಾರಿಯಲ್ಲಿ ಹೆಸರುವಾಸಿಯಾದುದು.

ಕೊಯಮುತ್ತೂರಿನಲ್ಲಿ ಐದು ಸಾವಿರಕ್ಕೂ ಮಿಕ್ಕಿ ಕೆಲಸಗಾರರು ನಿರುದ್ಯೋಗಿಗಳಾಗುವ ಸಂಭವವಿದೆಯೆಂದು ಅಂದಾಜು ಮಾಡಲಾಗಿದೆ. ದಿಲ್ಲಿ ನಗರದಲ್ಲಿ 2000 ಕೆಲಸಗಾರರು, ಉತ್ತರ ಪ್ರದೇಶದಲ್ಲಿ ಸುಮಾರು ಎರಡೂವರೆಲಕ್ಷ ಕೆಲಸಗಾರರು, (ಅದೇ ಪ್ರಮಾಣದಲ್ಲಿ ಇತರ ರಾಜ್ಯಗಳಲ್ಲಿ ಕೂಡಾ) ನಿರುದ್ಯೋಗಕ್ಕೊಳಗಾಗುವ ಭೀತಿಯಿದೆ.

— —

ಜಿಲ್ಲೆಯಲ್ಲಿ ಮೊದಲಿಗರು

ಕಳೆದ 1962ನೇ ಅಕ್ಟೋಬರ್ ತಿಂಗಳಲ್ಲಿ ನಡೆದ ಟೈಪ್‌ರೈಟಿಂಗ್ ಪ್ರೋಫಿಸಿಯನ್ಸಿ ಗ್ರೇಡ್ ಪರೀಕ್ಷೆಯಲ್ಲಿ ಪಾಸಾದ ಎರಡು ಮಂದಿಯಲ್ಲಿ ಕಾರ್ಕಳದ ಬೋರ್ಡ್ ಹೈಸ್ಕೂಲಿನ ಕಮರ್ಶಿಯಲ್ ಅಧ್ಯಾಪಕರಾದ ಶ್ರೀನಿವಾಸರಾಯರು ಒಬ್ಬರೆಂದು ತಿಳಿದು ಬಂದಿದೆ. ಈ ಜಿಲ್ಲೆಯಲ್ಲಿ ಈ ಪರೀಕ್ಷೆಯಲ್ಲಿ ಪಾಸಾಗುವವರಲ್ಲಿ ಶ್ರೀ| ಶ್ರೀನಿವಾಸರಾಯರು ಮೊದಲಿಗರು.

ರೋಟರಿಕ್ಲಬ್ ಜಿಲ್ಲಾ ಸಮ್ಮೇಳನ

ರೋಟರಿಕ್ಲಬ್ಬಿನ ಜಿಲ್ಲಾ ಸಮ್ಮೇಳನವು ಫೆಬ್ರವರಿ ತಾ. 8ರಂದು ಜರಗುವುದೆಂದು ಕೇಳಬರುತ್ತದೆ. ಮೈಸೂರು ರಾಜ್ಯಪಾಲ ಶ್ರೀ| ಜಯಚಾಮರಾಜ ಒಡೆಯರ್‌ರವರು ಇದನ್ನು ಉದ್ಘಾಟಿಸುವರೆನ್ನಲಾಗಿದೆ.

ರೋಟರಿ ಡಿಸ್ಟ್ರಿಕ್ಟ್ 317ರ ಗವರ್ನರ್‌ಶಿಪ್ಪಿಗೆ ಆಯ್ಕೆಗಾಗಿ ಉಡುಪಿ ಕ್ಲಬ್ಬಿನ ಸದಸ್ಯರಾದ ಡಾ| ಟಿ. ಎಂ. ಎ. ಪೈಯವರು ಉಮೇದ್ವಾರಿಕೆ ಸಲ್ಲಿಸಿರುವರಾಗಿ ತಿಳಿದುಬಂದಿದೆ.

ರೋಟರಿ ಕ್ಲಬ್ಬಿನಲ್ಲಿ ಶ್ರೀ| ಬಿ. ಸಿ. ಆಳ್ವ

ಕಳೆದ ತಾ. 10ರಂದು ಸೇರಿದ ಮಂಗಳೂರು ರೋಟರಿ ಕ್ಲಬ್ ಸದಸ್ಯರ ಸಭೆಯನ್ನುದ್ದೇಶಿಸಿ ಮಾತನಾಡುತ್ತ ಇಲೆಕ್ಟ್ರಿಸಿಟಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀ| ಬಿ. ಸಿ. ಆಳ್ವರು, ರಾಜ್ಯದ ಪುನರ್ಘಟನೆಯ ನಂತರ ವಿದ್ಯುಚ್ಛಕ್ತಿ ಕ್ಷೇತ್ರದಲ್ಲಾದ ಅಭಿವೃದ್ಧಿಗಳ ಮಾಹಿತಿ ಇತ್ತರು. ಜಿಲ್ಲೆಯಲ್ಲಿ ಹೆಚ್ಚಿನ ವಿದ್ಯುಚ್ಛಕ್ತಿ ಪೂರೈಕೆಯಾಗುವ ದಿಸೆಯಲ್ಲಿ ಇದೀಗ ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಸುಮಾರು 50 ಲಕ್ಷ ರೂ. ಖರ್ಚು ತಗಲುವ ಹಲವಾರು ಯೋಜನೆಗಳು ನಿರ್ಮಾಣ ಕಾರ್ಯದಲ್ಲಿ ಮುಂದುವರಿಯುತ್ತಿವೆ ಎಂದು ಅವರು ತಿಳಿಸಿದರು.

ನೀರಾವರಿ ಖಾತೆಯ ಉಪಸಚಿವರು

ಮೈಸೂರು ರಾಜ್ಯದ ಸಣ್ಣ ನೀರಾವರಿ ಖಾತೆಯ ಉಪಸಚಿವ ಶ್ರೀ| ಆಲೂರು ಹನುಮಂತಪ್ಪನವರು ಕಳೆದ ತಾ. 9ರಂದು ಬಂಟ್ವಾಳ, ಪುಂಜಾಲಕಟ್ಟೆ, ಬೆಳ್ತಂಗಡಿ, ಧರ್ಮಸ್ಥಳಗಳಿಗೆ ಸಂದರ್ಶನವಿತ್ತು ಅಲ್ಲಿಯ ಸಣ್ಣ ನೀರಾವರಿ ಯೋಜನೆಗಳನ್ನು ಪರಿಶೀಲಿಸಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಧ್ಯವೆಂದು ಕಂಡುಬರುವ ಎಲ್ಲಾ ಸಣ್ಣ ನೀರಾವರಿ ಯೋಜನೆಗಳನ್ನು ಕೂಡಲೇ ಕಾರ್ಯಗತಗೊಳಿಸಬೇಕೆಂದು ಉಪಸಚಿವರು ಅಧಿಕಾರಿಗಳಿಗೆ ಸೂಚನೆಯಿತ್ತರು. — —

ನಡ್ಡೋಡಿನ್ನ (ನಡ್ಡೋಡಿ) ಗುತ್ತಿನಲ್ಲಿ ಮೂಲೆಪತ್ತಿ ಕುಂಞಣ್ಣಾಳುವ ("ಮೂಲೊಡು ಭಾರಿನಾರ್ ಮೂಲೆಪತ್ತಿ ಕುಂಞಿ ಣ್ಣಾಳುವೆರ್")ರು ವಾಸವಾಗಿದ್ದರು.

ಅವರು ತಾಯಿಯನ್ನು ಕೊಂದ ಪಾಪವನ್ನು ಬಂಗಾರದ ಕಂಡಿಗೆಯಲ್ಲಿಯೂ, ತಂದೆಯನ್ನು ಕೊಂದ ದುರಿತವನ್ನು ಬೆಳ್ಳಿಯ ಕರಡಿಗೆಯಲ್ಲಿಯೂ, ಗೋವು ಕೊಂದ ದೋಷವನ್ನು ಅಸ್ಥಿಯ ಕರಡಿಗೆಯಲ್ಲಿಯೂ, "ಮರಿ" (ಸರ್ಪ) ಕೊಂದ "ಮಗ್ಗಿನ" (ಪಾಪ)ವನ್ನು ಮರದ ಕರಡಿಗೆಯಲ್ಲೂ, ಕಾಗೆ ಕೊಂದ ಚಂಡಾಲತ್ವವನ್ನು ಕಂಚಿಯ ಕರಡಿಗೆಯಲ್ಲೂ ಹಾಕಿಟ್ಟರು. (ಈ ಪಾಪಗಳನ್ನೆಲ್ಲ ತನ್ನ ಹೃದಯದ ಗೂಡಿನಲ್ಲಿ ಹುದುಗಿಸಿಟ್ಟು ದುಃಖಿತರಾಗಿ ಪಾಪಪರಿಹಾರಕ್ಕೇನು ಮಾರ್ಗವೆಂದುಕೊಂಡು ಕಾತರಿಸುತ್ತಿದ್ದರು ಎಂಬ ಭಾವವು.)

ಕುಂಞಣ್ಣಾಳುವರು ಮನದಲ್ಲಿ ತೀವ್ರ ಯೋಚನಾಕ್ರಾಂತರಾಗಿ—

"ಈ ಪಾಪಗಳನ್ನು ಎಂತು ಕಳೆದೇನು? ಇವುಗಳನ್ನು ಪವಿತ್ರ ತೀರ್ಥದಲ್ಲಿ ಯಾವಾಗ ಅದ್ದಿ ನೀಗಬಲ್ಲೆ? ಪುಣ್ಯವನ್ನು ಯಾವಾಗ ಕೈಕೊಂಡೇನು? ಮಾಯಿ (ಕುಂಭ)ಯ ಉಬರಮುಕ್ಕೆ ತೀರ್ಥವನ್ನು ಮಿಂದು ಎಂದು ಪುನೀತನಾದೇನು? ಮಾಯಿಯ ಉಬರಮುಕ್ಕೆ ತೀರ್ಥವನ್ನು ಯಾರು ಮಿಂದಿದ್ದಾರೆ? ನೆಲ್ಲಿತೀರ್ಥಕ್ಕೆ ಯಾರು ಹೋಗಿದ್ದಾರೆ? ಗಂಗೆ ನಾಡಿಗೆ ಯಾರು ಯಾತ್ರೆಮಾಡಿ ಬಂದಿದ್ದಾರೆ? ಬಡಗು ತೀರ್ಥ, ತೆಂಕು ಗಂಗೆಗೆ ಹೋಗಿ ಬಂದವರು ಯಾರಿದ್ದಾರೆ? ಇನ್ನು ಮುಂದಕ್ಕೆ ಯಾರು ಹೋಗುವವರಿದ್ದಾರೆ?

ಎಕ್ಕಾರು ಗುಡ್ಡದ ಕೊಡಮಣಿತ್ತಾಯ ದೈವ

ನನಗೆ ದಿಕ್ಕುದಾರಿಗಳ ತಿಳಿವಿಲ್ಲ; ನಾವು ಸ್ಥಾನಗಳು ಗೊತ್ತಿಲ್ಲ; ಪುಣ್ಯಕ್ಷೇತ್ರಗಳ ಪರಿಚಿತಿ ಇಲ್ಲ. ಗುಂಡ್ಯೊಟ್ಟು ಬರ್ಕೆಯಲ್ಲಿ ನೆಕ್ಕರೆ ನೇರಿಂಗಿ ಬಲ್ಲಾಳರು ಹಿಂದಕ್ಕೆ ಹೋಗಿದ್ದಾರೆಯಂತೆ; ಪುಣ್ಯಕ್ಷೇತ್ರಗಳನ್ನು ತಿರುಗಿ ತೀರ್ಥಸ್ನಾನ ಮಾಡಿಕೊಂಡು ಬಂದಿದ್ದಾರೆಯಂತೆ. ಅವರೆಡೆಗೆ ಹೋಗಿ ಹಾದಿಯ ಅಂತುಗೊತ್ತು ಕೇಳಿ ತಿಳಿದುಕೊಳ್ಳುವೆನು"—ಎಂದು ತೀರ್ಮಾನಿಸಿದರು.

ಹಾಗೆ ತೀರ್ಮಾನಿಸಿಕೊಂಡು ಕುಂಞಣ್ಣಾಳುವರು ಗುಂಡ್ಯೊಟ್ಟು ಬರ್ಕೆಗೆ—ನೆಕ್ಕರೆ ನೇರಿಂಗಿ ಬಲ್ಲಾಳರ ಬೀಡಿಗೆ—ಹೋಗಿ ಪ್ರವೇಶಿಸಿದರು.

ಚಾವಡಿಯ ತೂಗುಯ್ಯಾಲೆಯಲ್ಲಿ ಕುಂಞಣ್ಣಾಳುವರು ಕುಳಿತುಕೊಂಡರು.

"ಏನು ಬಂದೆ, ಕುಂಞಣ್ಣಾಳುವಾ?"—ಎಂದು ಬಲ್ಲಾಳರು ವಿಚಾರಿಸಿದರು.

"ಬಂದ ಕಜ್ಜಕಾರ್ಯವನ್ನು ಹೇಳುವೆನು. ಮೊದಲಾಗಿ ನನ್ನ ಪಕ್ಕದಲ್ಲಿ ನೀವು ಕೂತುಕೊಳ್ಳಿರಿ."

ಬಲ್ಲಾಳರು ತೂಗುಯ್ಯಾಲೆಯ ಮೇಲೆ ಕುಂಞಣ್ಣಾಳುವರ ಪಕ್ಕದಲ್ಲಿ ಕುಳಿತುಕೊಂಡರು. ಇಬ್ಬರೂ ಊರಿನ ಸುಖಕಷ್ಟ, ಕೃಷಿ, ಪೇಟೆಧಾರಣೆ ಇತ್ಯಾದಿ ಲೋಕಾಭಿರಾಮವಾಗಿ ಮಾತಾಡುತ್ತ ಕೊಂಚ ಹೊತ್ತು ಕಳೆದರು. ಮಾತಿನ ಮಧ್ಯೆ ಕುಂಞಣ್ಣಾಳುವರು ಬಲ್ಲಾಳರನ್ನು ಅಡ್ಡಯಿಸಿ ಈ ರೀತಿ ವಿನಂತಿಸಿದರು:

"ಬಲ್ಲಾಳರೇ, ಊರಿನ ಸುಖಕಷ್ಟ ಮಾತಾಡುತ್ತ ಕೂತರೆ ನಮಗೆ ಕತ್ತಲೆಯಾದುದು ಅರಿವಾಗಲಿಕ್ಕಿಲ್ಲ. ಅದು ಹಾಗೆ ಇರಲಿ! ನೀವು ತೀರ್ಥಕ್ಷೇತ್ರಗಳಿಗೆ ಹೋಗಿದ್ದಿರಲ್ಲವೇ? ಗಂಗೆನಾಡಿಗೆ ಯಾತ್ರೆಮಾಡಿ ಬಂದಿದ್ದೀರಲ್ಲಾ? ನನಗೂ ತೀರ್ಥಯಾತ್ರೆ ಮಾಡಿಕೊಂಡು ಬರಬೇಕೆಂದು ಮನಸ್ಸಾಗಿದೆ. ನನ್ನ ಪಾಪಗಳನ್ನೆಲ್ಲ ಪಾವನ ತೀರ್ಥಗಳಲ್ಲಿ ತೊಳೆಬಿಟ್ಟು ಪುನೀತನಾಗಿ ಬರಬೇಕೆಂಬ ಪ್ರಬಲೇಚ್ಛೆ ನನ್ನಲ್ಲಿ ನಟ್ಟಿಕೊಂಡಿದೆ. ನನಗೆ ಹಾದಿಯ ಅಂತುಗೊತ್ತು ತಿಳಿಸಿರಿ. ನಾನು ಪ್ರಯಾಣ ಹೊರಡುತ್ತೇನೆ"

"ಹೋ ಮಹಾರಾಯ! ಅಲ್ಲಿಗೆ ಹೋಗುವುದು ಸಾಮಾನ್ಯದ ಕೆಲಸವೆಂದು ಭಾವಿಸಿದೆಯೋ? ಅತ್ಯಂತ ದುಷ್ಕರವಾದ ಹಾದಿ! ಹುಲಿ ಪೆಬ್ಬುಲಿಗಳ ರಾಜ್ಯ! ಪ್ರಯಾಣದಲ್ಲಿ ನಾನು ಕೊಂಡೊಯ್ದ ಆಳುದ್ದ ಊರುಗೋಲು ಬರುವಾಗ ಗೇಣುದ್ದವಾಗಿಕೊಂಡಿತು! ನನಗೆ ಹೋಗಿ ಬರುವುದಕ್ಕೆ ಹನ್ನೆರಡು ಹನ್ನೆರಡು—ಇಪ್ಪತ್ತನಾಲ್ಕು ವರುಷಗಳು ಹಿಡಿಯಿತು. ನಿನ್ನ ಉತ್ಸಾಹಭಂಗವನ್ನು ನಾನು ಮಾಡುವುದಕ್ಕೆ ಎಳಸುತ್ತಿಲ್ಲವಾದರೂ ಅತೀವ ಪ್ರಯಾಸ ಹಾಗೂ ಸಾಹಸವನ್ನು ಪಡಬೇಕಾದೀತೆನ್ನುವೆ"—ಎಂದರು ಬಲ್ಲಾಳರು.

"ಆಗಲಿ, ಬಲ್ಲಾಳರೇ. ನನ್ನ ದೈವದೇವರುಗಳ, ಗುರುಹಿರಿಯರ ಮತ್ತು ನಿಸ್ವಾರ್ಥ ಪುಣ್ಯಾತ್ಮರ ಅಥವಾ ಅನುಗ್ರಹ ಆಶೀರ್ವಾದಗಳ ಬಲ ನನ್ನ ಮೇಲಿದ್ದರೆ ನಾನು ನಿರಾತಂಕವಾಗಿ ಯಾತ್ರೆಯನ್ನು ಕೈಕೊಂಡು ಬಂದೇನೆಂಬ ಆತ್ಮವಿಶ್ವಾಸ ನನಗುಂಟು. ತಾವು ನನಗೆ ಹಾದಿ ಪರಿಚಯವನ್ನೂ ಪ್ರಯಾಣದ ಸಲುವಾದ ಸೂಕ್ತ ಸಲಹೆಗಳಿಂದೊಡಗೂಡಿದ ಎಲ್ಲಾ ಸವಿವರವನ್ನೂ ಕೊಡಮಾಡಬೇಕು."

ಬಲ್ಲಾಳರು ಕುಂಞಣ್ಣಾಳುವರಿಗೆ ನಿರ್ದೇಶನವನ್ನೀಯುವರು:

"ಪ್ರಯಾಣ ಹೋಗುವಾಗ ನಾನು ಹಚ್ಚಡದ ತುದಿಯಲ್ಲಿ ಮುನ್ನೂರು, ಚೀಲದಲ್ಲಿ ಐನೂರು ಬೆಳ್ಳಿಯ ನಾಣ್ಯಗಳನ್ನು ಹಾದಿ ಖರ್ಚಿಗೆಂದು ಕಟ್ಟಿಕೊಂಡು ಹೋದೆನು. ಮರಳುವಾಗ ನನ್ನ ಕೈಯಲ್ಲಿ ಒಂದು ಚಿಕ್ಕಾಸು ಕೂಡ ಉಳಿಯಲಿಲ್ಲ. ಹೋಗುವಾಗ ನೀನೊಂದು ದನದ ಕರು, ಒಂದು ಎಮ್ಮೆಯ ಕರು ಮತ್ತು ಕೋಳಿ, ಕೋಳಿಯ ಕತ್ತಿಗಳನ್ನು ಸಂಗಡ ಒಯ್ಯತಕ್ಕದ್ದು. ಅಲ್ಲದೆ ಒಂದು ಕಟ್ಟು ಕಂಗಿನ ಸೋಗೆ ಬುಡದ ಹಾಳೆಯನ್ನು ಹಿಡಿದುಕೋ. ಪ್ರಯಾಣದಲ್ಲಿ ಪ್ರಥಮತಃ ಹುಲಿಯ ರಾಜ್ಯವನ್ನು ದಾಟಲುಂಟು. ಹುಲಿ ನಿನ್ನನ್ನು ತಿನ್ನುವೆ ಕೊಲ್ಲುವೆನೆಂದು ಮುನ್ನುಗ್ಗಿ ಓಡಿಬರುತ್ತದೆ. ಹುಲಿಗೆ ದನದ ಕರುವನ್ನು ತಿನ್ನಲರ್ಪಿಸು. ಈ ಪ್ರದೇಶವನ್ನು ಹಾಯ್ದ ಮೇಲೆ "ಬಲಿಪ ರಾಜ್ಯ" (ಪೆಬ್ಬುಲಿ ರಾಜ್ಯ)ಕ್ಕೆ ಬರುತ್ತಿ. ಪೆಬ್ಬುಲಿಗೆ ಎಮ್ಮೆಯ ಕರುವನ್ನು ನೀಡು. ಇದನ್ನು ದಾಂಟಿದರೆ ಉರಗ ರಾಜ್ಯ ಸಿಗುತ್ತದೆ. ಇಲ್ಲಿ ಹೆಜ್ಜೆಗೊಂದರಂತೆ ಕತ್ತಿಯನ್ನು ಹಾವಿಗೆ ಕೊಡು. ತರುವಾಯದಲ್ಲಿ "ಜುದುಕ ರಾಜ್ಯ" (ಜಂಬೂಕ ರಾಜ್ಯ)ಕ್ಕೆ ಆಗಮಿಸುವಿ. ಜಂಬೂಕನಿಗೆ ಕೋಳಿಯನ್ನು ಬಾರಣೆಕೊಡು. ಮುಂದೆ ಉಜ್ಜುಉಜ್ಜಪ್ಪು ಎನ್ನುವ ಹೆಸರಿನ ಮಹೋದ್ಯಮ ಕರ್ಮಶೀಲಳಾದ ಸ್ತ್ರೀಯೊಬ್ಬಳ ರಾಜ್ಯವನ್ನು ನೀನು ಸಂದಿಸುತ್ತಿ. ಅವಳು ಹೊತ್ತಾರೆ ಬಿತ್ತಿ ಸಾಯಂಕಾಲ ಕೊಯ್ದು ಜೋಡು ಏತಗಳಿಂದ ನೀರು ಒಡ್ಡುತ್ತ ಇದ್ದಾಳೆ. ಈ ರಾಜ್ಯವನ್ನು ಹಿಂದಿಕ್ಕಿ ಮುಂಬೊತ್ತಿದರೆ ಒಂದು ಪದವು ಸಿಗುತ್ತದೆ. ಇದನ್ನು ದಾಟಿದರೆ ಒಂದು ಗುಡ್ಡ. ಆ ಮೇಲೆ ಒಂದು ಬೈಲು ಅಡ್ಡ ಬರುತ್ತದೆ. ಮತ್ತೆ ಸಾಗಿದರೆ ಮೂರು ಕಾಸರ್ಕನ ಮರಗಳು ಇದಿರಾಗುವವು. ಇಲ್ಲಿಂದ ಮೊಣಕಾಲಿಗೆ ಮತ್ತು ಮುಂಗೈಗೆ ಹಾಳೆ ಬಿಗಿದು ಊರುತ್ತ ಕುಂಟುತ್ತ ತೆವಳುತ್ತ ದಾರಿಕ್ರಮಿಸತಕ್ಕದ್ದು. ಈ ಇರ್ಕಟ್ಟಿನ ಸ್ಥಳವನ್ನು ತೊರೆದು ಬಂದ ಮೇಲೆ ಹೊಟ್ಟೆಗೆ ಹಾಳೆ ಕಟ್ಟಿಕೋ. "ಬಂಜ್ಯೊಪಲ್ಲ ರಾಜ್ಯ" (ಹೊಟ್ಟೆ ಎಳೆದುಕೊಂಡು ಹರಿದಾಡುವ ರಾಜ್ಯ) ಹಿಡಿ. ಈ ರಾಜ್ಯವನ್ನುಳಿದು ಬಂದರೆ ಗಂಗೆನಾಡನ್ನು ಬಳಸಿಕೊಂಡ ನದಿಯ ಈಚೆ ದಡವನ್ನು ಸೇರುವಿ. ಇಲ್ಲಿಗೆ ತಲಪುವಾಗ ಹನ್ನೆರಡು ವರ್ಷ ಕಾಲ ಹಿಡಿಯುತ್ತದೆ. ನೀನು ಈ ದಡಕ್ಕೆ ಬಂದು ಸೇರುವ ಕಾಲದಲ್ಲಿ ಎದುರುಬದುರಾಗಿ ಈಚೆ ದಡದಲ್ಲಿ ಒಂದು ಸಿರಿಹೊನ್ನೆಮರ, ಆಚೆ ದಡದಲ್ಲಿ ಒಂದು ಸಿರಿಹೊನ್ನೆ ಮರ ಬೆಳೆದಿರುತ್ತವೆ. ಹನ್ನೆರಡು ವರುಷಕ್ಕೊಮ್ಮೆ ಈ ಎರಡು ಮರಗಳು ಬಲಿತು ಬಾಗಿ ಒಂದಕ್ಕೊಂದು

ಜೋಡಿಕೊಳ್ಳುತ್ತವೆ. ಈಜಿ ದಡದಿಂದ ಮರವನ್ನೇರಿ ಎದುರಾದ ಮರದಿಂದ ಕೆಳಕ್ಕಿಳಿದು ಆಚೆ ದಡವನ್ನು ಸೇರು. "ನೂಲಿನ ಸೇತುವೆ"ಯೊಂದು ಅಡ್ಡ ಬರುತ್ತದೆ. ಅದನ್ನು ಬಹು ಜಾಗರೂಕತೆಯಿಂದ ದಾಟಿ ಬಂದೆಯಾದರೆ ಪುಣ್ಯಪ್ರದವಾದ ಗಂಗೆತೀರ್ಥವನ್ನು ಸಮಾಗಮಿಸುತ್ತಿ. ನೀನು ಈ ಪವಿತ್ರ ತೀರ್ಥದಲ್ಲಿ ಮುಳುಗಿ ಸ್ನಾನಮಾಡು; ನಿನ್ನ ಸರ್ವ ಪಾಪಗಳನ್ನು ಅದರಲ್ಲಿ ತೊಳೆದುಕೋ. ಹಾಗೇ ಇಲ್ಲಿರುವ ಇಪ್ಪತ್ತನಾಲ್ಕು ತೀರ್ಥಗಳನ್ನು ಇಳಿದು ಸ್ನಾನಮಾಡು. ಇಲ್ಲಿಂದ ಕೊಡಗು ಜಿಲ್ಲೆಯ ತಲಕಾವೇರಿಗೆ ಪ್ರಯಾಣಿಸು. ತಲಕಾವೇರಿಯಲ್ಲಿ ನೀನು ತೀರ್ಥಸ್ನಾನವನ್ನು ಮಾಡುವಾಗ ನಿನ್ನ ಕಿವಿಗೆ ಮೂರು ಅಶರೀರ ಪ್ರಶ್ನೆಗಳು ಕೇಳಬಂದೀತು. ಆ ಪ್ರಶ್ನೆಗಳಿಗೆ ನೀನು ಅವಶ್ಯ ಕಂಡಂತೆ ಉತ್ತರಿಸಬಹುದು; ಇಲ್ಲವಾದರೆ ನಿರುತ್ತರನಾಗಿ ಮಿಣ್ಣನೇ ಬಂದರೂ ಬರಬಹುದು. ನೀನು ತೀರ್ಥಯಾತ್ರೆ ಮುಗಿಸಿ ಮರಳಿ ಸ್ವಸ್ಥಾನವನ್ನು ಸೇರುವಾಗ ಇಪ್ಪತ್ತನಾಲ್ಕು ವರ್ಷ ಹಿಡಿದೀತು. ನನ್ನ ಆಳುದ್ದ ಲೋಹದ ಊರುಗೋಲು ಬರುವಾಗ ಗೇಣುದ್ದವಾಗಿ ಸವೆದಿತ್ತು. ನಿನ್ನದು ಕೂಡ ಹಾಗೇ ಆದೀತು."

ಅಷ್ಟು ಕೇಳಿ ಕುಂಞಾನಾಳುವ ನೆಕ್ಕರಿ ನೇರಿಂಗಿ ಬಲ್ಲಾಳರ ಕಾಲು ಮುಟ್ಟಿ ನಮಸ್ಕರಿಸಿದರು. ಗುಂಡ್ಯೊಟ್ಟು ಬರ್ಕೆಯಿಂದ ತನ್ನ ನಡ್ಡೇಡಿನ್ನ ಗುತ್ತಿಗೆ ಮರಳಿದರು.

ಕುಂಞಾನಾಳುವರು ಊರ ನೆರೆಹೊರೆಯ ಕೋಣ ಹಾಗೂ ಆಳುಗಳನ್ನು ಬರ(ಳಿ"ಕಡಲಾಯ ಮಡಲಾಯ"(ಎತ್ತರ ತಗ್ಗುಳ್ಳ) ಕಂಬಳಗಳನ್ನು ಬೆಳಗಿನ ಜಾವ ಬೆಳ್ಳಕ್ಕಿ ಸ್ವರಕೊಡುವ ಪೂರ್ವದಲ್ಲಿ, ಕಾಗೆ ನೆಲದಲ್ಲಿ ಕೂರುವುದರೊಳಗಾಗಿ ಹಲ್ಲಕ್ಕಿಯಲ್ಲಿ ಬೀಜ ಬಂಡಿಯಲ್ಲಿ "ಪೂಕರೆ" (ಧಾನ್ಯಲಕ್ಷ್ಮಿ ಪ್ರಸನ್ನತೆಗೋಸ್ಕರ ತೆಂಗಿನ ತಳಿರು ಹೂಗಳಿಂದ ಸಿಂಗರಿಸಿ ಮಾಡಿ ಇಡುವ ಪ್ರಾರ್ಥನಾ ಸಂಕೇತ. ಇದರಿಂದ ಸಸ್ಯಾದಿಗಳು ಫಲಭರಿತವಾಗುತ್ತವೆಂದು ನಂಬಿ ಈ ಪದ್ಧತಿಯನ್ನು ಕೃಷಿಕರು ಆಚರಿಸುತ್ತಾರೆ. ಗದ್ದೆಯ ನಡುವೆ ಬಾಳೇಸಸಿಯನ್ನು ಕೂಡ ಸಾಂಕೇತಿಕವಾಗಿ ನೆಡುತ್ತಾರೆ.) ಒಯ್ದು ಕಂಬಳವನ್ನು ಉತ್ತು ಸಮತಟ್ಟುಮಾಡಿ ಬಿತ್ತಿ ಹಸನಮಾಡಿಸಿದರು.

ಕುಂಞಾನಾಳುವರು ಗುರುಹಿರಿಯರ ಆಶೀರ್ವಚನಗಳನ್ನು ಪಡೆದು, ದೈವ ದೇವರುಗಳಿಗೆ ವಂದಿಸಿ ತನ್ನ ನಡ್ಡೇಡಿನ್ನ ಗುತ್ತನ್ನು ಬಳಿಕ ತೊರೆದು ಯಾತ್ರೆ ಹೋದರು.

ಪ್ರಯಾಣದಲ್ಲಿ ಅವರು ನೆಕ್ಕರಿ ನೇರಿಂಗಿ ಬಲ್ಲಾಳರು ಸೂಚಿಸಿದ ಎಲ್ಲಾ ಸನ್ನಾಹ ಸಾಧನಗಳನ್ನು ಅಣಿಮಾಡಿಕೊಂಡು ಹೋಗಿದ್ದರು. ಹುಲಿರಾಜ್ಯ, ಪಿರ್ಬುಲಿರಾಜ್ಯ, ಉರಗರಾಜ್ಯ, ಜಂಬುಕ ರಾಜ್ಯಗಳನ್ನು ಕ್ರಮವಾಗಿ ಸಂಧಿಸಿದಾಗ ಮೃಗಜಂತುಗಳಿಗೆ ಬಲ್ಲಾಳರು ಸೂಚಿಸಿದ ನೆಕರು, ಎಮ್ಮೆಕರು ಇತ್ಯಾದಿ ಬಲಿ ಬಾಣೆ ಕೊಟ್ಟು, ಉಜ್ಜ ಉಜ್ಜವು ಆವಳ ರಾಜ್ಯವನ್ನು ಹಿಂದಿಕ್ಕಿ, ಪದವು—ಗದ್ದ—ಬೈಲುಗಳನ್ನು ದಾಂಟಿ, ಮೂರು ಕಾಪರಕನ ವೃಕ್ಷಗಳಿರುವೆಡೆಗೆ ಬಂದು, ಮುಂದೆ ಮೋಹಕಾಲು ಮುಂಗೈಗಳಿಗೆ ಹಾಳೆ ಬಿಗಿದು ತೆವಳಿಕೊಂಡು ಹೋಗುವ ದುರ್ಗಮ ಪ್ರದೇಶವನ್ನು ಮುಸ್ತು ಹೊಟ್ಟೆ ಎಳೆದು ಹರಿದಾಡುವ ಕರ್ಕಟ್ಟನ ರಾಜ್ಯವನ್ನು ಕೂಡ ಪಾರಾಗಿ ಹಾಯ್ದು, ಅಲ್ಲಿಂದ ಸಿರಿ ಹೊನ್ನೆ ಮರವಿರುವ ನದಿ ತಟಕ್ಕೆ ಆಗಮಿಸಿದರು. ನದಿಯ ಇಬ್ಬದಿಯ ಹಂಡೆಗಳಲ್ಲಿ ಬೆಳೆದುಕೊಂಡು ಹನ್ನೆರಡು ವರ್ಷಕ್ಕೊಮ್ಮೆ ಜೊತೆಗೂಡುವ ಸಿರಿ ಹೊನ್ನೆ ಮರಗಳು ಕುಂಞಾನಾಳುವರ ಸಂದರ್ಶನದ ಕಾಲದಲ್ಲಿ ಆಗತಾನೇ ಅವೆರಡು ಬಾಗಿ ಒಂದಕ್ಕೊಂದು ಅಂಟಿಕೊಂಡಿದ್ದವು.

ಕುಂಞಾನಾಳುವರು ಮರವನ್ನೇರಿ, ಎದುರಿಗಿರುವ ಮರದಿಂದ ಕೆಳಕ್ಕಿಳಿಯುತ್ತ ಆಚೆ ದಂಡೆಯನ್ನು ತಲಪಿದರು; ಗಂಗೆ ನಾಡನ್ನು ಸೇರಿದರು "ನೂಲಿನ ಸೇತುವೆ"ಯನ್ನು ಅತೀ ಜಾಣ್ಮೆಯಿಂದ ಹಾಯ್ದು ಬಂದರು. ಪಾವನ ಗಂಗೆಯಲ್ಲಿ ತೀರ್ಥಸ್ನಾನಕ್ಕೆ ನಿಂತರು.

ಮಾತೃಹತ್ಯ ಪಾಪವನ್ನು ಆಳುದ್ದ ತೀರ್ಥದಲ್ಲಿ ನಿಂತು ತೊಳೆದುಕೊಂಡರು! ತಂದೆಯನ್ನು ಕೊಂದ ದುರಿತವನ್ನು ಕಂಠಪೂರ್ತಿ ನೀರಿನಲ್ಲಿ ನಿಂತು ಹರಿದೊಗೆದರು! ಗೋಹತ್ಯ ದೋಷವನ್ನು ಕಟಿತನಕದ ನೀರಿನಲ್ಲಿ ನಿಂತು ಒಗೆಬಿಟ್ಟರು! "ಮರ ಕೊಂದ"ಮಗ್ಗಿನ"ವನ್ನು ಮೊಣಕಾಲುದ್ದ ನೀರಲ್ಲಿ ನಿಂತು ವಿಮುಕ್ತಗೊಳಿಸಿದರು! ಕಾಗೆ ಕೊಂದ ಚಂಡಾಲತ್ತವನ್ನು ಪಾದೊದ್ದ ನೀರಿನಲ್ಲಿ ನಿಂತು ಚೆಲ್ಲಿಕೊಟ್ಟರು!

ಗಂಗೆನಾಡಿನಲ್ಲಿ ಇಪ್ಪತ್ತನಾಲ್ಕು ತೀರ್ಥಸ್ನಾನಗಳನ್ನು ಮಾಡಿಕೊಂಡು ಕುಂಞಾನಾಳುವರು ತಲಕಾವೇರಿಗೆ ಹೋದರು.

ತಲಕಾವೇರಿಯನ್ನು ಸಂದರ್ಶಿಸಿ ಆ ತೀರ್ಥದಲ್ಲಿ ಮುಳುಗಿ ಅವರು ಮೇಲಕ್ಕೆ ಬರುವ ಕಾಲದಲ್ಲಿ ಮೂರು ಅಶರೀರ ವಾಕ್ಯನ್ನು ಆಲಿಸಿದರು.

"ಮೂಲೆಪತ್ತಿ ಕುಂಞಾನಾಳುವ! ನಾನು ಬರಬೇಕೇ? ನಾನು ಬರಬೇಕೇ? ನಾನು ಬರಬೇಕೇ?"

ಅದಕ್ಕೆ ಕುಂಞಾನಾಳುವರು ಅಚಂಚಲ ಕಂಠದಿಂದ ಉತ್ತರಿಸಿದರು:

"ಬರುವವರನ್ನು ನಾನು ಬರಬೇಡರೆಂದು ಹೇಳಲಾರೆ; ಬಾರದವರನ್ನು ಬನ್ನಿ ಎಂದು ಕೂಡ ಹೇಳಲಾರೆ. ನಿಮ್ಮ ಖುಷಿ; ನಿಮ್ಮ ಮರ್ಜಿ!"

ಕುಂಞಾನಾಳುವರು ಸ್ವದೇಶಾಗಮನ ಮಾಡಿದರು. ತೀರ್ಥಯಾತ್ರೆ ಮುಗಿಸಿ ಮರಳುವಾಗ ಇಪ್ಪತ್ತನಾಲ್ಕು ವರ್ಷಗಳು ಸಂದುಹೋಗಿತ್ತು. ಆಳುದ್ದ ಲೋಹದ ನಡಕೋಲು ಗೇಣುದ್ದವಾಗಿಕೊಂಡಿತ್ತು. ಬರುತ್ತ ಅವರು ಎಕ್ಕಾರು ತಾಂಗಡಿಗೆ ಬಂದು ಮುಟ್ಟಿದರು. ಅಲ್ಲೊಂದು ಪಾಲೆ (ಹಾಲೆ) ಮರದ ಬುಡದಲ್ಲಿ ಪ್ರಯಾಣದ ಆಸರು ಬೀಸರಿಂದ ಆಸವಳಿದು ಗಾಳಿಗೆ ಮೈಯೊಡ್ಡಿ ಕೂತರು.

ಅನಿತರಲ್ಲಿ ಪುನರಪಿ ಅವರಿಗೆ ಅಶರೀರವಾಣಿ ಕೇಳಿಸಿತು!

"ಪಾಲೆಗೆ ಮುಹೂರ್ತಮಾಡು. ಕೋಲಿಗೆ "ಕುಂಟೆ" (ಗುಂಟೆ) ಊರು. ಬಳಿಕ ಹೋಗು."

ಕುಂಞಾನಾಳುವ ಪಾಲೆ ಮರಕ್ಕೆ ಹಾಳೆ ಕಟ್ಟಿದರು ಹಲಸಿನ ಮರದ ಬುಡದಲ್ಲಿ ಕೋಲಿಗೆ ಗುಂಟೆ ಊರಿದರು.

ಕುಂಞಾನಾಳುವರು ಹಾಗೆ ಮಾಡಿ ಹೋದ ವೇಳೆ, ಜೆನ್ನಿಗೇ ಪಾಲೆಮರದ ಬುಡದಲ್ಲಿ ಒಕ್ಕಣ್ಣ ವೃಷಭವೊಂದು ಉದಯಿಸಿ ದಿಗ್ಗನೇ ನಿಂತುಕೊಂಡಿತು! ಗುಂಟೆ ಊರಿದೆಡೆ—ಹಲಸಿನ ಮರದ ಬುಡದಲ್ಲಿ—ಬಿಳಿವರ್ಣದ ಹುಂಜವೊಂದು ಪ್ರತ್ಯಕ್ಷೀಕರಿಸಿಕೊಂಡಿತು! ಆ ತೆರನಿಂತಾಗ ಕೊಡಮಣಿತ್ತಾಯ ಭೂತ ಇಳಿದುಬಂದನು!

ತಲಕಾವೇರಿಯಿಂದ ಕೊಡಮಣಿತ್ತಾಯ ದೈವ ಕುಂಞಾನಾಳುವರನ್ನು ಮಾಯದಲ್ಲಿ ಅನುಸರಿಸಿ ಬಂದಿದ್ದನು!

ಕೊಡಮಣಿತ್ತಾಯ ಎತ್ತರದ ಸ್ಥಳವನ್ನು ಹುಡುಕುತ್ತ ಮುಂಬರಿದನು. ಎಕ್ಕಾರು ತಾಂಗಡಿಯ ಗುಡ್ಡ ಕಾಣಿಸಿತು, ಅದನ್ನು ಏರಿದನು. ಅಲ್ಲೊಂದು ಭೂತಸ್ಥಾನವಿತ್ತು. ಅದರ ಬಾಗಿಲು ಒಡೆದನು. ಒಳಗೆ ನುಗ್ಗಿದನು. ಮುಗೆ ಮೂರ್ತಿ ಮಣಿಕಟ್ಟಲೆ ಗಗ್ಗರ ತಲೆಪಟ್ಟಿ ಒಡ್ಯಾಣ ಇತ್ಯಾದಿ ದೈವಗಳ ಚಿನ್ನಾಭರಣಗಳನ್ನು ತೆಗೆದು ಕಟ್ಟೇಲು ಉಳ್ಳಾಲ್ತಿ ಹೊಳೆಗೆ ಬಿಸುಟಿದನು. ಸಾವಿರ ಮಾನ್ಯ ಭೂತಗಳಲ್ಲಿ ನಾಲ್ಕನ್ನು (ಉಲ್ಲಾಯ, ಜಾರಂದಾಯ, ಪಿಲಿಚಾಮುಂಡಿ, ಧೂಮಾವತಿ) ಮಾತ್ರ ಉಳಿಸಿದನು. ಹೀಗೆ ಕೊಡಮಣಿತ್ತಾಯ ಅಲ್ಲಿ ಆ ಸ್ಥಾನದಲ್ಲಿ ನೆಲೆನಿಂದನು!

ಅವನ ಕಳೆಯೇರಿತು; ಜನರು ನಂಬಿದರು; ಎಕ್ಕಾರು ಗುಡ್ಡದ ಕೊಡಮಣಿತ್ತಾಯನೆಂಬ ಖ್ಯಾತಿ ನಾಲ್ಕು ದಿಕ್ಕಿಗೂ ಹರಡಿತು!

ಈಗಲೂ ಮೂಲೆಪತ್ತಿ ಕುಂಞಾನಾಳುವರ ಸಂತಾನ ಕುಟುಂಬದವರು ಎಕ್ಕಾರು ಗುಡ್ಡಸ್ಥಾನಕ್ಕೆ ಕೋಲದಂದು ಬರಬೇಕು.

ಕೊಡಮಣಿತ್ತಾಯ ದೈವದ ಕೋಲ ಎಕ್ಕಾರು ತಾಂಗಡಿ ಗುಡ್ಡದಲ್ಲಿ ಧನುಮಾಸ ಹೋಗಿ ಮಕರಮಾಸಕ್ಕೆ ಬರುವ ಸಂಕ್ರಾಂತಿಯಲ್ಲಿ ಗಡದಿನ ಉತ್ಸವದಿಂದೊಡಗೂಡಿ ಜರಗುತ್ತದೆ. ಪೆರ್ರ (ಪೆರಾರು)ದ ನೆಲ್ಲಿತೀರ್ಥ ಇದರ ಮರುದಿನ ನಡೆಯುತ್ತದೆ.

["ಕೊಡಮಂದಾಯೆ ಪಂಡ್‌ಂಡ ದೇವೆರೆಗ್ ಒರು ಮುಟ್ಟೆ ಎಲ್ಲಿ; ಭೂತೊಡುಗ್ ಇರ್ ಮುಟ್ಟೆ ಮಲ್ಲೆ." (ಕೊಡಮಣಿತ್ತಾಯ ದೇವರಿಗಿಂತ ಮುಷ್ಠಿಪ್ರಮಾಣದಷ್ಟು ಸಣ್ಣವನು; ಭೂತಕ್ಕಿಂತ ದೊಡ್ಡವನು.) ಈ ನ್ಯಾಯದಿಂದ ಕೊಡಮಣಿತ್ತಾಯ ದೈವ ದೇವತೆಗಳ ಸಾಲಿನಲ್ಲಿ ಸೇರಿದವನೆಂಬ ಅಭಿಪ್ರಾಯವಾಗುತ್ತದೆ.

ಎಕ್ಕಾರು, ಶಿಬರು, ಕಟೀಲುಗಳಲ್ಲಿ ಕೊಡಮಣಿತ್ತಾಯನ ಸ್ಥಾನಗಳಿವೆ. ಅಲ್ಲದೆ ಬೈದರ್ಕಳ ಗರಡಿ ಇರುವಡೆಗಳಲ್ಲಿ ಇರುವನು. ಕೊಡಮಣಿತ್ತಾಯ ದೇವಾಂಗ ಪದ್ಧತಿ ರೀತ್ಯಾ ರಾಗಭೋಗ ಬಲಿ ನೇಮಗಳನ್ನು ತೆಕ್ಕೊಳ್ಳುತ್ತಾನೆ.

ತಂತ್ರಶಾಸ್ತ್ರಾನುಸಾರ ಕೊಡಮಣಿತ್ತಾಯನನ್ನು ಕೊಡಮಣಿತ್ತಾಯ ಅಂದರೆ ಕೊಡಗಿನ ಮಣ್ಣಿನ ತಾಯಿ ಎಂಬುದಾಗಿ ಸಂಬೋಧಿಸುತ್ತಾರೆ.

ಕೊಡಮಣಿತ್ತಾಯ ದೈವವನ್ನು ಸ್ತ್ರೀ ಪುರುಷ ಲಿಂಗಗಳೆಂದ ಕರೆಯಲ್ಪಡುವುದರಿಂದ ಈ ದೈವದ ಹೆಸರಲ್ಲಿ ಎರಡು ಪರಿಭೇದಗಳಿರಬಹುದೆಂಬ ವಿಚಾರಕ್ಕೆಡೆಯಾಗುವುದು.]

ಎಂ. ನಾರಾಯಣ,
ಮಂಗಳೂರು.

—

ನಗರದಲ್ಲಿ ನೀರಾವರಿ ಉಪಮಂತ್ರಿಗಳು

ಮೈಸೂರು ಸರಕಾರದ ನೀರಾವರಿ ಉಪಮಂತ್ರಿ ಶ್ರೀ। ಅಲೂರು ಹನುಮಂತಪ್ಪನವರು ಕಳೆದ ತಾ. 7ರಂದು ಮಂಗಳೂರಿಗೆ ಆಗಮಿಸಿ, ತಾ. 8ರಂದು ಬೆಳ್ತಂಗಡಿ ಮಾರ್ಗವಾಗಿ ಚಿಕ್ಕಮಗಳೂರಿಗೆ ಮುಂದುವರಿದರು. ಉಪಮಂತ್ರಿಗಳು ಮಡಿಕೇರಿಯಿಂದ ಮಂಗಳೂರಿಗೆ ಬರುವಾಗ, ದಾರಿಯಲ್ಲಿ ಪುತ್ತೂರಲ್ಲಿ ಪುರ ಪ್ರಮುಖರನ್ನು ಭೇಟಿಯಾಗಿ ಈ ಕ್ಷೇತ್ರದಲ್ಲಿ ಕೃಷಿ ಅಭಿವೃದ್ಧಿಗೆ ನೀರಾವರಿ ಸೌಲಭ್ಯದ ಕುರಿತು ವಿಚಾರವಿನಿಮಯ ನಡೆಸಿದರು.

ತಾ. 8ರಂದು ಬೆಳಗ್ಗೆ ಜಿಲ್ಲೆಯ ಎಂ. ಪಿ.ಗಳ, ಎಂ. ಎಲ್. ಎ.ಗಳ ಮತ್ತು ಅಧಿಕಾರಿಗಳ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಮಾನ್ಯ ಹನುಮಂತಪ್ಪನವರು, ತೀವ್ರ ಭತ್ತ ಕೃಷಿ ವ್ಯವಸಾಯ ಯೋಜನೆಗೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಸೇರಿಸಲಾಗಿದೆ ಎಂದು ತಿಳಿಸಿದ್ದಲ್ಲದೆ ಪ್ರಕೃತದ ವಿಷಮ ಪರಿಸ್ಥಿತಿ ಮತ್ತು ಅವಶ್ಯಗಳನ್ನು ಅನುಲಕ್ಷಿಸಿ, ತೃತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ರಾಜ್ಯದ ನೀರಾವರಿ ಯೋಜನೆ ಮತ್ತು ಇತರ ಪೂರೈಕೆಗಳಲ್ಲಿ ಶೇಕಡಾ 50ರಷ್ಟು ಹೆಚ್ಚಳವನ್ನು ಕೇಂದ್ರ ಸರಕಾರವು ನೀಡಿದೆ ಎಂದರು. ದ. ಕ. ಜಿಲ್ಲೆಯಲ್ಲಿ 67 ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದ್ದು ಈ ಬಗ್ಗೆ ಸುಮಾರು 56 ಲಕ್ಷ 80 ಸಾವಿರ ರೂಪಾಯಿ ವೆಚ್ಚ ತಗಲುವುದೆಂದೂ ಇದರಿಂದ 10,200 ಎಕ್ರೆ ಜಮೀನಿಗೆ ನೀರು ಸರಬರಾಯಿಯಾಗಬಲ್ಲುದೆಂದೂ ಅವರು ವಿವರಿಸಿದರು. ಮೈಸೂರು ಎಸೆಂಬ್ಲಿ ಸ್ಪೀಕರ್ ಶ್ರೀ। ಬಿ. ವಿ. ಬಾಳಿಗರು ಸಭೆಯಲ್ಲಿ ಉಪಸ್ಥಿತರಿದ್ದರು.

ಮತ್ಸ್ಯ ಶೋಧನಾ ಕಾರ್ಯಾರಂಭ

ಮಂಗಳೂರಿಗೆ ಆಗಮಿಸಿರುವ ಜಪಾನೀ ಮತ್ಸ್ಯ ವ್ಯವಸಾಯ ತಜ್ಞರು ಇಷ್ಟರಲ್ಲೇ 'ಟಾರ್ಪನ್' ಎಂಬ ಹಡಗದಲ್ಲಿ ತೀರ ಬಿಟ್ಟು ಬಹುದೂರ ಕಡಲಿನಲ್ಲಿ ಮೀನು ಸಿಗುವ ಕೇಂದ್ರಗಳನ್ನು ಪರಿಶೀಲಿಸಿ ಕಂಡುಹಿಡಿಯುವ ಕಾರ್ಯ ಆರಂಭಿಸಿರುವರು. ಕೊ-ಡೈರೆಕ್ಟರ್ ಎಸ್. ಐಬೂಚಿ ಎಂಬವರ ನೇತೃತ್ವದಲ್ಲಿ ಬಂದಿರುವ ಈ ತಂಡದವರಿಗೆ ಮಂಗಳೂರು ಲಾಲ್‌ಬಾಗ್ ಜೋಡುಗುಡ್ಡೆಯ ಬಳಿ ವಸತಿ ನಿರ್ಮಿಸಿಕೊಡಲಾಗಿದೆ; ಇವರು 3 ವರ್ಷಗಳ ಕಾಲ ಮಂಗಳೂರಲ್ಲಿ ನೆಲಸುವರಾಗಿ ತಿಳಿದುಬಂದಿದೆ.

ಡಾ। ಕೆ. ಕೆ. ರೈಯವರ ನಿಧನ

ಬಂಟ್ವಾಳ ಎಲ್. ಎಫ್. ಡಿಸ್ಪೆನ್ಸರಿಯ ಡಾಕ್ಟರರಾಗಿದ್ದು, ಕೆಲಸಮಯದ ಹಿಂದೆ ನಿವೃತ್ತರಾದ ಡಾ। ಕೆ. ಕೆ. ರೈಯವರು ಕಳೆದ ತಾ. 8ರಂದು ಪುತ್ತೂರಲ್ಲಿ ಟೆನ್ನಿಸ್ ಆಡುವಾಗ ಅನಿರೀಕ್ಷಿತ ಹೃದಯಸ್ತಂಭನಗೊಂಡು ಅಕಾಲ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರು ಬಂಟ್ವಾಳ ತಾಲೂಕು ಬೋರ್ಡು ಅಧ್ಯಕ್ಷೆ ಶ್ರೀಮತಿ ಲೀಲಾವತಿ ರೈಯವರ ಪತಿಯವರಾಗಿದ್ದಾರೆ.



ಕಾಶೀಮಠಾಧೀಶರು ಬಂಟ್ವಾಳದಲ್ಲಿ

ಕಾಶೀಮಠಾಧೀಶ ಶ್ರೀಮತ್ ಸುಧೀಂದ್ರತೀರ್ಥ ಶ್ರೀಪಾದಂಗಳವರು ಬಂಟ್ವಾಳಕ್ಕೆ ಚಿತ್ತೈಸಿ ಅಲ್ಲಿ ಮೊಕ್ಕಾಂಮಾಡಿರುತ್ತಾರೆ.

ಜೀವವಿಮಾ ಏಜಂಟರ ಸಂಘ

ಮಂಗಳೂರು: ಜೀವವಿಮಾ ಏಜಂಟರ ಸಂಘದ ಮಾಸಿಕ ಸಭೆಯು ಕಳೆದ ತಾ. 6ರಲ್ಲು ಪೊಪ್ಯುಲರ್ ಬಿಲ್ಡಿಂಗ್ಸ್‌ದಲ್ಲಿ ಶ್ರೀ। ಎಂ. ರತ್ನಾಕರ ಕಾಮತರ ಅಧ್ಯಕ್ಷತೆಯಲ್ಲಿ ಜರಗಿದಾಗ ಜೀವವಿಮಾ ಕೊರ್ಪೊರೇಶನ್‌ದವರು ಲೆಕ್ಕಾಚಾರದ ವರ್ಷಾಂತ್ಯವನ್ನು ಮಾರ್ಚ್ 31ಕ್ಕೆ ಬದಲಾಯಿಸಿದುದರಿಂದ, ಕಳೆದ ದಶಂಬರ್ 31ಕ್ಕೆ ಅಂತ್ಯವಾಗುವ 12 ತಿಂಗಳುಗಳಿಗೆ ಏಜಂಟರಿಗೆ ಜಮಾಗೊಳ್ಳಲು ಅರ್ಹವಾದ ಹೊಸ ವಿಮಾ ವ್ಯವಹಾರಕ್ಕೆ ಮತ್ತು ಆದರ ಮೇಲಣ ಬೋನಸ್ಸಿಗೆ ಸಂಬಂಧಪಟ್ಟ ನಿಯಮಗಳ ಕುರಿತು ಸ್ಪಷ್ಟೀಕರಣ ಮಾಡುವಂತೆ ಉಡುಪಿ ಡಿವಿಜನಲ್ ಅಫೀಸಿನವರನ್ನು ಕೇಳಿಕೊಳ್ಳಬೇಕೆಂದು ಸರ್ವಾನುಮತದಿಂದ ನಿರ್ಧರಿಸಲಾಯಿತು.

ರಾಷ್ಟ್ರದ ರಕ್ಷಣಾ ನಿಧಿಗೆ 20 ಸಾವಿರದ ಕೊಡುಗೆ

ಮಂಗಳೂರು ಮೆಟಲ್ ಬಾಕ್ಸ್ ಕಂಪೆನಿಯ ಪರವಾಗಿ ಅದರ ಜನರಲ್ ಮೆನೇಜರ್ ಶ್ರೀ। ಜಿ. ಭಗತ್‌ರವರು 20,000ದ ಚೆಕ್ಕನ್ನು ರಾಜ್ಯದ ಉಪಸಚಿವ ಶ್ರೀ। ಎ. ಹೆಪುಮಂತಪ್ಪನವರ ಮೂಲಕ ರಾಷ್ಟ್ರ ರಕ್ಷಣಾನಿಧಿಗೆ ಒಪ್ಪಿಸಿರುವರಾಗಿ ತಿಳಿಯಲಾಗಿದೆ. ಜಿಲ್ಲಾಧಿಕಾರಿಗಳಲ್ಲಿ ರಕ್ಷಣಾ ನಿಧಿಗಾಗಿ ಬಂದ ಒಟ್ಟು ಹಣ ರೂ. 10,37,039-03, 414ಗ್ರಾಮ್ ಚಿನ್ನ, 6 ವಜ್ರಗಳು, 2 ಬೆಳ್ಳಿಯ ಕಾಸ್ಕೆಟುಗಳು ಮತ್ತು 6 ಪ್ರೈಜ್ ಬೊಂಡುಗಳು.

ಫುರ್ತಾದೊ ಮೆಮೊರಿಯಲ್ ಬೆಡ್‌ಮಿಂಟನ್

ಮಂಗಳೂರು ಬಿ.ಇ.ಎಂ. ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ಈ ವರ್ಷ ನಡೆದ ಎಸ್. ಎ. ಫುರ್ತಾದೊ ಸ್ಮಾರಕ ಬೆಡ್‌ಮಿಂಟನ್ ಫೈನ್ಸ್ ಟೂರ್ನಮೆಂಟನಲ್ಲಿ ಕೊನೆಯ ಪಂದ್ಯವು ಎಸ್. ಸಿ. ಸಿ. ಮತ್ತು ಕಳೆದ ವರ್ಷದ ವಿಜಯಿಗಳಾದ ಸ್ಪುಟ್ನಿಕ್‌ದವರೊಳಗೆ ನಡೆದಾಗ ಎಸ್. ಸಿ. ಸಿ.ಯವರು ವಿಜಯಿಗಳಾಗಿ ಪಾರಿತೋಷಕ ಪಡೆದರು.

ನಿಧನ

ಕಾರ್ಕಳ ತಾಲೂಕು ಶಿವಪುರ ಅನಂತ ಭಟ್ಟರು ತಾ. 6ರಂದು ತನ್ನ 58ನೇ ವಯಸ್ಸಿನಲ್ಲಿ ಶಿವಪುರದಲ್ಲಿರುವ ತನ್ನ ಮನೆಯಲ್ಲಿ ಹೃದಯಸ್ತಂಭನದಿಂದ ದೈವಾಧೀನರಾದರು.

ಪಳ್ಳಿಕೆರೆಯ ಪ್ರಮುಖ ವ್ಯಾಪಾರಿಗಳಲ್ಲೊಬ್ಬರಾಗಿರುವ ಶ್ರೀ। ಮಂಗಲ್ಪಾಡಿ ವೆಂಕಟ್ರಾಯ ಶ್ಯಾನುಭಾಗರ ಧರ್ಮಪತ್ನಿ ಶ್ರೀಮತಿ ಪದ್ಮಾವತಿ ಯಾನೆ ಕಮಲಮ್ಮನವರು ಕಳೆದ ತಾ. 6ನೇ ರವಿವಾರ ಮುಂಜಾನೆ ಪಳ್ಳಿಕೆರೆಯ ತಮ್ಮ ಸ್ವಗೃಹದಲ್ಲಿ ತಮ್ಮ 72ನೇ ಹಿರೀ ವಯಸ್ಸಿನಲ್ಲಿ ಸ್ವರ್ಗಸ್ಥರಾದರು.

ಬಾವಿಗೆ ಬಿದ್ದು ದುರ್ಮರಣ

ಮಂಗಳೂರು ಪುತ್ತುಪ್ರಭು ಲೇನ್‌ನಲ್ಲಿ ವಾಸಿಸಿಕೊಂಡಿರುವ ಸುಂದರಿ ಎಂಬ 18 ವರ್ಷ ಪ್ರಾಯದ ತರುಣಿಯು ಕಳೆದ ತಾ. 6ರಂದು ಸಂಜೆ ಮನೆಯ ಬಾವಿಗೆ ಬಿದ್ದು ದುರ್ಮರಣ ಹೊಂದಿದ ದುರಂತವು ವರದಿಯಾಗಿದೆ.

ವಿವೇಕಾನಂದ ಶತಾಬ್ಧಿ

ಜನವರಿ ತಾ. 17ರಿಂದ 31ರ ತನಕ ಸ್ವಾಮಿ ವಿವೇಕಾನಂದರ ಶತಾಬ್ದಿ ಆಚರಿಸಲು ಮತ್ತು ಕನ್ಯಾಕುಮಾರಿಯಲ್ಲಿ ವಿವೇಕಾನಂದ ಶಿಲೆಯ ಮೇಲೆ ಸ್ಮಾರಕ ರಚಿಸುವ ಸಲುವಾಗಿ ನಿಧಿ ಸಂಗ್ರಹಿಸಲು ಮಂಗಳೂರಲ್ಲಿ ಸ್ವಾಮಿ ವಿವೇಕಾನಂದ ಶತಾಬ್ದಿ ಆಚರಣೆ ಮತ್ತು ಸ್ವಾಮಿ ವಿವೇಕಾನಂದ ಶಿಲಾಸ್ಮಾರಕ ಸಮಿತಿಯನ್ನು ಕಳೆದ ತಾ. 6ರಂದು ನಗರಸಭಾಪತಿ ಶ್ರೀ। ಜಿ. ಸೋಮಶೇಖರರಾಯರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ರಚಿಸಲಾಗಿದೆ.

ಬಿ. ಇ. ಎಂ. ಹೈಸ್ಕೂಲ್ ವರ್ಧಂತ್ಯುತ್ಸವಗಳು

ಮಂಗಳೂರು ಬಿ. ಇ. ಎಂ ಹೈಸ್ಕೂಲಿನ ವರ್ಧಂತ್ಯುವಗಳು ಕಳೆದ ತಾ. 3ರಿಂದ 7ರ ವರೆಗೆ ಈ ಕೆಳಗಿನಂತೆ ಯಶಸ್ವಿಯಾಗಿ ನಡೆದುವು.

ತಾ. 3ರಂದು ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು, ಮಂಗಳೂರು ಸಿಟಿ ರೇಂಜಿನ ಶಾಲಾ ಇನ್ಸ್‌ಪೆಕ್ಟರ್ ಜನಾಬ್ ಹಸನ್ ಸಾಹೇಬ್ ಬಿ.ಎ., ಬಿ.ಟಿ.ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ। ನರಸಿಂಹ ಭಕ್ತರು ಶಾಲಾ ಸ್ವಸ್ತಿ ಭಾಷಣ ಮಾಡಿದ್ದರು.

ತಾ 4ರಂದು ಹೆತ್ತವರ-ಅಧ್ಯಾಪಕರ ದಿನಾಚರಣೆಯು, ಕರ್ನಾಟಕ ಪೋಲಿಟೆಕ್ನಿಕಿನ ಪ್ರಿನ್ಸಿಪಾಲ್ ಶ್ರೀ। ಆರ್. ಜಿ. ರಾಮಸ್ವಾಮಿ ಬಿ. ಇ. ಎ. ಎಮ್. ಐ. ಇ. ರವರ ಅಧ್ಯಕ್ಷತೆಯಲ್ಲಿ ನಡೆದಾಗ ಸ್ಟೇಟ್ ಪೋರ್ಟ್ ಅಫೀಸಿನ ಸಹಾಯಕಾಧಿಕಾರಿ ಶ್ರೀ। ಎಚ್. ರಮೇಶರಾಯರು ಸ್ವಸ್ತಿ ವಾಚನ ಮಾಡಿದ್ದರು.

ಶಾಲಾ ದಿನಾಚರಣೆಯು ತಾ. 5ರಂದು ದ. ಕ. ಜಿಲ್ಲಾಧಿಕಾರಿ ಶ್ರೀ। ಸಿ. ಜೆ. ಪದ್ಮನಾಭರ ಅಧ್ಯಕ್ಷತೆಯಲ್ಲಿ ನಡೆದಾಗ, ಶ್ರೀಮತಿ ಕನಕ ಪದ್ಮನಾಭನ್‌ರವರು ಬಹುಮಾನಗಳನ್ನು ವಿತರಣೆ ಮಾಡಿದ್ದರು. ದ. ಕ. ಜಿಲ್ಲಾ ಅಸಿಸ್ಟಾಂಟ್ ಎಜ್ಯುಕೇಶನಲ್ ಅಫೀಸರ್ ಶ್ರೀ। ವೈ. ಗೋಪಾಲ, ಬಿ. ಎ. ಎಲ್. ಟಿ ಯವರು ಶಾಲಾ ಸ್ವಸ್ತಿ ಭಾಷಣ ಮಾಡಿದ್ದರು. ವಿವಿಧ ವಿನೋದಾವಳಿ ಕಾರ್ಯಕ್ರಮದ ಅಂಗವಾಗಿ ಶಾಲೆಯ ಕನ್ನಡ ಪ್ರಾಧ್ಯಾಪಕ ಶ್ರೀ। ಅಪ್ಪಯ್ಯ ಬೇಲಗದ್ದೆ, ವಿದ್ವಾನ್‌ರವರಿಂದ ಬರೆಯಲ್ಪಟ್ಟ 'ನೇಫಾನಂದ ಲಡಾಖ್‌ಲಕಾ' ಎಂಬ ಪ್ರಹಸನವು ಅತ್ಯಂತ ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತ್ತು.

ಬಿ. ಇ. ಎಂ. ಹೈಸ್ಕೂಲು ಹಳೇ ವಿದ್ಯಾರ್ಥಿ ಸಂಘದ ರಜತಮಹೋತ್ಸವವು ತಾ. 6ರಂದು ಸಂಜೆ ಮಂಗಳೂರು ನಗರಸಭಾಪತಿ ಶ್ರೀ। ಜಿ. ಸೋಮಶೇಖರ

ರಾಯರ ಅಧ್ಯಕ್ಷತೆಯಲ್ಲಿ ಜರಗಿತ್ತು. ಅಂದು ಹಳೇ ವಿದ್ಯಾರ್ಥಿಗಳು ‘ನವ ಪ್ರಭಾತ’ ಎಂಬ ಚಾರಿತ್ರಿಕ ನಾಟಕವನ್ನು ಅಭಿನಯಿಸಿದ್ದರು.

ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕ ಭೋಜನ ಕೂಟವು ತಾ. 7ರಂದು ರಾತ್ರಿ ಶಾಲಾವಠಾರದಲ್ಲಿ ನಡೆದಾಗ ಮರ್ಕೆರಾ ಹಿಲ್ ಮ್ಯೂಸಿಕ್ ಪಾರ್ಟಿಯವರಿಂದ ಸಂಗೀತ ಮತ್ತು ಜಿಲ್ಲೆಯ ಹೆಸರಾಂತ ಹಾಸ್ಯಪಟು ಶ್ರೀ ಎಸ್. ಆರ್. ಬಾಲಗೋಪಾಲರಿಂದ ಹಾಸ್ಯಪ್ರದರ್ಶನವಿತ್ತು.

ಶ್ರೀನಿವಾಸ ಪಾಠಶಾಲಾ ಓರಿಯಂಟಲ್ ಹೈಸ್ಕೂಲ್

ಇದರ ಶಾಲಾದಿನಾಚರಣೆಯು ತಾ. 19-1-63ನೇ ಶನಿವಾರ ಶಾಲಾ ವಠಾರದಲ್ಲಿ ಜರಗಲಿದೆ.

ಕ್ರಿಕೆಟ್-ಫುಟ್‌ಬೋಲ್

ಎಂ. ಜಿ. ಎಸ್. ಸ್ಮಾರಕ ಕ್ರಿಕೆಟ್ ಪಂದ್ಯಾಟದ ಮಂಗಳೂರು ವಲಯದ ಫೈನಲಿನಲ್ಲಿ ಮಂಗಳೂರು ಸೈಂಟ್ ಎಲೋಸಿಯಸ್ ಕೊಲೇಜ್‌ದವರು ಸುರತ್ಕಲ್ ಇಂಜಿನಿಯರಿಂಗ್ ಕೊಲೇಜ್‌ದವರನ್ನು ಸೋಲಿಸಿದರು.

ಕೆನರಾ ಫುಟ್‌ಬೋಲ್ ಎಸೋಸಿಯೇಶನ್‌ನ ಆಶ್ರಯದಲ್ಲಿ ಮಂಗಳೂರು ಕೇಂದ್ರ ಮೈದಾನಿನಲ್ಲಿ ತಾ. 9ರಂದು ಆರಂಭವಾದ ಹೆವಿಲ್ಯನ್ ಫುಟ್‌ಬೋಲ್ ಪಂದ್ಯದ ಪ್ರಥಮ ಮ್ಯಾಚಿನಲ್ಲಿ ಕಸ್ತೂರಬಾ ಮೆಡಿಕಲ್ ಕೊಲೇಜ್‌ದವರು ಕರ್ನಾಟಕ ಪೊಲಿಟೆಕ್ನಿಕ್‌ದವರನ್ನು 4-1 ಗೋಲುಗಳಿಂದ ಸೋಲಿಸಿದರು.

ಕರ್ನಾಟಕ ಪ್ರಾದೇಶಿಕ ಆಯುರ್ವೇದ ಸಮ್ಮೇಳನ

ಮಾರ್ಚ್ ತಿಂಗಳ ಕೊನೆಯ ವಾರದಲ್ಲಿ ಮಂಗಳೂರಲ್ಲಿ ಜರಗಿಸಲು ನಿರ್ಣವಾದ ಕರ್ನಾಟಕ ಪ್ರಾದೇಶಿಕ ಆಯುರ್ವೇದ ಸಮ್ಮೇಳಕ್ಕೆ ಸಂಬಂಧಪಟ್ಟ ಭೇಷಜ ವಸ್ತು ಪ್ರದರ್ಶನವೊಂದನ್ನು ಏರ್ಪಡಿಸಲು ಮತ್ತು ‘ವೈದ್ಯನ ಕಾಣಿಕೆ’ ಎಂಬ ಹೊತ್ತಗೆಯನ್ನು ಪ್ರಕಟಿಸಲು ಸ್ವಾಗತ ಸಮಿತಿಯವರು ತೀರ್ಮಾನಿಸಿದ್ದಾರೆ.

ಮಾಲವೀಯ ಶತಾಬ್ಧಿ

ಕಿನ್ನಿಗೋಳಿ ಪೋಂಪೈ ಹೈಸ್ಕೂಲಿನಲ್ಲಿ ಕಳೆದ ತಾ. 7ರಂದು ಪಂಡಿತ ಮದನ ಮೋಹನ ಮಾಲವೀಯರ ಶತಮಾನೋತ್ಸವವು ಶ್ರೀ ಬಿ. ಡಿಮೆಲ್ಲೊರವರ ಅಧ್ಯಕ್ಷತೆಯಲ್ಲಿ ಜರಗಿತು.

ನಗರಸಭಾಪತಿಯವರಿಂದ ವಾರ್ಡ್ ಸಂಚಾರ

ಮಂಗಳೂರು ನಗರಸಭಾಪತಿ ಶ್ರೀ ಜಿ. ಸೋಮಶೇಖರರಾಯರು ನಗರದ 34 ವಾರ್ಡುಗಳನ್ನೂ ಸಂದರ್ಶಿಸಿ ಪ್ರತಿ ವಾರ್ಡಿನ ಆವಶ್ಯಕತೆಗಳೇನು ಬಗೆಹರಿಸಬೇಕಾದ ನ್ಯೂನತೆಗಳು ಯಾವುವು ಎಂಬುದರ ಪ್ರತ್ಯಕ್ಷ ಅನುಭವ ಸಂಗ್ರಹಿಸುವ ಕಾರ್ಯಕ್ರಮ ಕೈಗೊಂಡಿದ್ದಾರೆಂದು ಗೊತ್ತಾಗಿದೆ. ವಾರ್ಡ್ ಸಂಚಾರ ಕಾಲದಲ್ಲಿ ಭಾರತ ರಕ್ಷಣಾ ನಿಧಿಗೆ ಹಣ ಸಂಗ್ರಹಿಸುವ ಕಾರ್ಯಕ್ರಮವನ್ನು ಅವರು ಇಟ್ಟುಕೊಂಡಿದ್ದಾರೆ. ಮುನ್ಸಿಪಲ್ ಕಮಿಷನರ್ ಪಿ. ಟಿ. ಆಳ್ವರೊಂದಿಗೆ ಸಂಚಾರದ ಪ್ರಥಮ ವೃತ್ತವನ್ನು ಆರಂಭಿಸಿ ಕಳೆದ ತಾ. 8ರಂದು ಬೆಳಿಗ್ಗೆ ಕುದ್ರೋಳಿ ದಕ್ಷಿಣ ವಾರ್ಡನ್ನು ಸಂದರ್ಶಿಸಿ ಅಲ್ಲಿಯ ವಾರ್ಡ್ ಕೌನ್ಸಿಲರರೊಂದಿಗೆ ವಾರ್ಡಿನ ಪರಿಸ್ಥಿತಿ ಪರಿಶೀಲಿಸಿದರು. ಈ ಸಂಚಾರಕಾಲದಲ್ಲಿ ರಾಷ್ಟ್ರೀಯ ರಕ್ಷಣಾ ನಿಧಿಗೆ ರೂ. 827-45 ಸಂಗ್ರಹವಾಯಿತು.

——

——

ಮಹಾಭಾರತ ಕಥಾಮೃತ

[2ನೇ ಪುಟದಿಂದ ಮುಂದುವರಿದುದು]

ಮನಸ್ಸಿನಲ್ಲಿ ಗ್ರಹಣವಾದ ವಿಷಯವನ್ನು ಮಾತ್ರ ಜೀವಾತ್ಮನು ಉಪಭೋಗಿಸಲು ಸಾಧ್ಯವು. ಅದ್ದರಿಂದ ಒಂದೇ ಕಾಲದಲ್ಲಿ ಒಂದಕ್ಕಿಂತ ಹೆಚ್ಚಿನ ವಿಷಯಗಳನ್ನು ಅನುಭವಿಸಲು ಸಾಧ್ಯವಿಲ್ಲವು” ಎಂದನು.

“ಹಾಗಾದರೆ ಮನಸ್ಸು ಮತ್ತು ಬುದ್ಧಿ ಇವುಗಳ ಲಕ್ಷಣಗಳಾವುವು?” ಎಂದು ಯುಧಿಷ್ಠಿರನು ಕೇಳಿದನು.

ಅಜಗರನು ಧರ್ಮರಾಯನ ಈ ಪ್ರಶ್ನೆಗೆ ಹೀಗೆ ನುಡಿದನು. “ಮನಸ್ಸು ಮತ್ತು ಬುದ್ಧಿ ಇವೆರಡರ ಅಂತರ ಮತ್ತು ಲಕ್ಷಣಗಳು ಈ ಪ್ರಕಾರ ಇವೆ.

ಬುದ್ಧಿರಾತ್ಮಾನುಗಾ ತಾತ ಉತ್ಪಾತೇನ ವಿಧೀಯತೇ।
ತದಾಶ್ರಿತಾ ಹಿ ಸಂಜ್ಞೈಷಾ ಬುದ್ಧಿಸ್ತಸ್ಯೈಷಿಣೀ ಭವೇತ್ ॥ ೨೫ ॥
ಬುದ್ಧಿರುತ್ಪದ್ಯತೇ ಕಾರ್ಯಾನ್ಮನಸ್ತೂತ್ಪನ್ನಮೇವ ಹಿ ॥
ಬುದ್ಧೇರ್ಗುಣವಿಧಾನೇನ ಮನಃ ಸ್ಯಾದ್ಗುಣವತ್ ಭವೇತ್ ॥ ೨೬ ॥

ಜೀವಾತ್ಮನಿಗೆ ಭೋಗ ಮತ್ತು ಮೋಕ್ಷ ಪ್ರಾಪ್ತಿಗೆ ಬುದ್ಧಿಯು ಅವಶ್ಯಕವು. ಜೀವಾತ್ಮನ ಆಶ್ರಯವನ್ನು ಪಡೆದು ಬುದ್ಧಿಯು ವಿಷಯಗಳ ಭೋಗಾಪೇಕ್ಷೆಯಿಂದ ವಿಷಯಗಳ ಕಡೆಗೆ ಸಂಚರಿಸುತ್ತದೆ. ಅದರಿ ಬುದ್ಧಿಯು ವಿಷಯಗಳನ್ನು ಮನಸ್ಸಿನ ದ್ವಾರ ಗ್ರಹಿಸಬೇಕಾಗಿದೆ. ಬುದ್ಧಿಯು ಗುಣ ವಿಧಾನ ಮತ್ತು ಜ್ಞಾನಶಕ್ತಿಯ ಪ್ರಭಾವವನ್ನು ಅನುಸರಿಸಿ ಮನಸ್ಸು ವಿಷಯಗಳನ್ನು ಗ್ರಹಿಸಲು ಸಮರ್ಥವಾಗಿದೆ. ಅದ್ದರಿಂದ ಬುದ್ಧಿಯು ಮೊದಲು ವಿಷಯ ಭೋಗಾಪೇಕ್ಷೆಯನ್ನು ನಿರ್ಧರಿಸುತ್ತದೆ ಅಥವಾ ಪ್ರಕಟಿ ಮಾಡುತ್ತದೆ. ಆಗ ಮನಸ್ಸು ಬುದ್ಧಿಯ ನಿರ್ದೇಶದಂತೆ ವಿಷಯವನ್ನು ಗ್ರಹಣ ಮಾಡಲು ತತ್ಪರವಾಗಿ ಕಾರ್ಯವನ್ನು ಮಾಡುತ್ತದೆ.”

ಆಗ ಯುಧಿಷ್ಠಿರನು “ಬುದ್ಧಿಮಾನ ಶ್ರೇಷ್ಠ ಸರ್ಪರಾಜೇಂದ್ರ! ನಿನ್ನ ಬುದ್ಧಿ ಪರಮಶ್ರೇಷ್ಠವಾಗಿದೆ. ನೀನು ಸರ್ವಜ್ಞನಾಗಿ ಸ್ವರ್ಗವಾಸಿಯಾಗಿದ್ದು ಹೇಗೆ ಮೋಹವಶನಾಗಿ ಬ್ರಾಹ್ಮಣರಿಗೆ ಅಪಮಾನ ಮಾಡಿದೆ? ಈ ವಿಷಯವನ್ನು ತಿಳಿಸಬೇಕೆಂದು ವಿಜ್ಞಾಪಿಸುತ್ತೇನೆ” ಎಂದು ಪ್ರಾರ್ಥಿಸಿದನು.

ಸರ್ಪರಾಜನು ತನ್ನ ಆತ್ಮಕಥೆಯನ್ನು ನಿರೂಪಿಸಿದನು. ಅದೇನೆಂದರೆ, “ರಾಜಾ! ಧನ ಸಂಪತ್ತು ಮತ್ತು ಶೂರ ವೀರ ನರನೂ ಮೋಹಜಾಲದಲ್ಲಿ ಬೀಳುತ್ತಾನೆ. ಸುಖವಿಲಾಸದಲ್ಲಿ ಮುಳುಗಿರುವ ಎಲ್ಲರೂ ಮೋಹಿತರಾಗುತ್ತಾರೆಂದು ನನ್ನ ಅನುಭವವು. ದೇವೇಂದ್ರ ಪದವಿಯ ಐಶ್ವರ್ಯ ಪ್ರಾಪ್ತಿಯಾಯಿತೆಂದು ನಾನು ಮದೋನ್ಮತ್ತನಾದೆ. ಅದ್ದರಿಂದ ನನ್ನ ಅಧಃಪತನವಾಯಿತು. ಪರಮಶ್ರೇಷ್ಠನಾದ ನಿನ್ನೊಡನೆ ಸಂವಾದ ಮಾಡುವ ಭಾಗ್ಯವು ನನಗೆ ಲಭಿಸಿತು. ಅದಕಾರಣ ಕಷ್ಟದಾಯಕ ಶಾಪದ ನಿವೃತ್ತಿಯಾಯಿತು. ಧರ್ಮರಾಜಯುಧಿಷ್ಠಿರನಿಂದ ನನ್ನ ಶಾಪದ ವಿಮೋಚನೆಯಾಗುವುದೆಂಬ ಅಗಸ್ತ್ಯಮಹರ್ಷಿಗಳ ಅಭಯ ವಚನವು ಈಗ ನೆನಪಿಗೆ ಬರುತ್ತದೆ. ಈಗ ಅಗಸ್ತ್ಯಮಹರ್ಷಿಗಳ ತಪಸ್ಸಿನ ಮಹತ್ವವು ಭಾಸವಾಗುತ್ತದೆ. ಅವರ ಬ್ರಹ್ಮಜ್ಞಾನ ಮತ್ತು ಬ್ರಾಹ್ಮಣತ್ವವನ್ನು ವರ್ಣಿಸಿ ಈಗ ನನಗೆ ಪರಮಾಶ್ಚರ್ಯವಾಗುತ್ತಿದೆ. ಅದ್ದರಿಂದ ನಿನ್ನೊಡನೆ ಈ ವಿಷಯದಲ್ಲಿ ಪ್ರಥಮ ಪ್ರಶ್ನೆಯನ್ನು ಕೇಳಿದೆನು. ರಾಜೇಂದ್ರ! ನೀನೆಂದ ವಚನವು ದಿವ್ಯವಾದುದು ಅದು ಸತ್ಯವು. ಸತ್ಯ, ಇಂದ್ರಿಯ ಸಮಯ, ತಪಸ್ಸು, ದಾನ, ಅಹಿಂಸಾ ಮತ್ತು ಧರ್ಮಪರಾಯಣತೆ ಈ ಸದ್ಗುಣಗಳು ಮಾನವನನ್ನು ಸದಾ ಸಿದ್ಧಿಯ ಪ್ರಾಪ್ತಿಮಾಡಲು ಶಕ್ಯವಾಗಿವೆ. ಜಾತಿ ಮತ್ತು ಕುಲವಲ್ಲವು. ನಿನ್ನ ಅನುಜನು ನನ್ನ ಬಂಧನದಿಂದ ಈಗಲೇ ಮುಕ್ತನಾಗಿರುವನು. ನಿಮ್ಮೆಲ್ಲರಿಗೆ ಕಲ್ಯಾಣವಾಗಲಿ. ನಾನು ಸ್ವರ್ಗಲೋಕಕ್ಕೆ ತೆರಳುವೆನು” ಎಂದು ಸ್ವರ್ಗಾರೋಹಣ ಮಾಡಿದನು.

ಯುಧಿಷ್ಠಿರನು ಮಹಾಪ್ರಸನ್ನನಾಗಿ ಧೌಮ್ಯಮಹರ್ಷಿ ಮತ್ತು ಭೀಮಸೇನನೊಡನೆ ಆಶ್ರಮಕ್ಕೆ ಹಿಂತಿರುಗಿದನು.

“ಕಲ್ಪನಾ ಡ್ರೆಸ್ ಸೆಂಟರ್”

ಮಂಗಳೂರು ನಗರದ ಕಾರ್ನಾಡ್ ಸದಾಶಿವರಾವ್ ರಸ್ತೆಯಲ್ಲಿರುವ ಉಡ್‌ಸೈಡ್ ಕಟ್ಟಡದಲ್ಲಿ ‘ಕಲ್ಪನಾ ಡ್ರೆಸ್ ಸೆಂಟರ್’ ಎಂಬ ಹೆಸರಿನ ರೆಡಿಮೇಡ್ ಉಡುಪುಗಳ ಮಾರಾಟದ ಅಂಗಡಿಯ ಪ್ರಾರಂಭೋತ್ಸವ ಕಳೆದ ತಾ. 10ರಂದು ನಡೆಯಿತು.

——

The Canara Industrial & Banking Syndicate, Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.,

ರಥಬೀದಿ, ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನಾಗಲಿ, ಬಡ್ಡಿಯನ್ನಾಗಲಿ, ವಾಯಿದೆಗೆ ಕೊಡದೆ ಇರುವಲ್ಲಿ ಅವರಿಗೆ ಆ ಬಗ್ಗೆ ಬಿಟ್ಟ ರಿಜಿಸ್ತ್ರಿ ನೋಟೀಸುಗಳು, ಕೆಲವು ಅವರು ಕಾಣಸಿಕ್ಕಲಿಲ್ಲವಾಗಿಯೂ, ಕೆಲವು ಅವರು ಮೃತಪಟ್ಟಿರುವರಾಗಿಯೂ ವಾಪಾಸು ಬಂದಿರುವುದರಿಂದ ಸದರಿ ಸಾಲಗಾರರು ಯಾ ಅವರ ವಾರೀಸುದಾರರು ಅವರಿಂದ ಬರತಕ್ಕ ಅಸಲು ಬಡ್ಡಿ ಹಣಗಳನ್ನು ಇದೇ ಬರುವ ಜನವರಿ ತಿಂಗಳ ತಾರೀಕು 19ರ ಒಳಗೆ ಬೇಂಕಿಗೆ ಪಾವತಿ ಮಾಡಿ ಅಡವಿಟ್ಟ ಆಭರಣಗಳನ್ನು ಬಿಡಿಸಿಕೊಂಡು ಹೋಗಲಿಕ್ಕೆ ತಪ್ಪಿದ್ದಲ್ಲಿ ಸದರಿ ಆಭರಣಗಳನ್ನು ಇದೇ 1963ನೇ ಇಸವಿ ಜನವರಿ ತಾರೀಕು 25ನೇ ಶುಕ್ರವಾರ ಅಪರಾಹ್ನ ಘಂಟೆ 4ಕ್ಕೆ ಆಗಲಿ, ಆ ತರುವಾಯ ಬೇಂಕಿನವರಿಗೆ ಅನುಕೂಲವಿರುವ ಇತರ ದಿನ ವ ಹೊತ್ತಿನಲ್ಲಿ ಈ ಬೇಂಕಿನ ರಥಬೀದಿಯಲ್ಲಿರುವ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಜಂಜಾಬ್ರ ನಂಬ್ರ	ಲೋನು ನಂಬ್ರ	ಸಾಲಗಾರರ ಹೆಸರು ಮತ್ತು ಫಿಳಾಸ	ಸಾಲದ ಮೊಬಲಗು	
1	3321/60	ಯಂ. ಸಂಕಣ್ಣ ಶೆಟ್ಟಿ, ದೊಡ್ಡಯ್ಯ ಶೆಟ್ಟಿಯವರ ಮಗ, ಪಕಿರಪೂವಬೀಡು, ಪೋಸ್ಟ್ ಕೆಂಜಾರು, ದ. ಕ. ...	540	00
2	3100/60	do do ...	200	00
3	1484/6.	do do	2,450	00
4	1620/61	do do	330	00
5	1634/61	do do ...	300	00
6	1676/61	do do ...	500	00
7	2051/61	do do ...	170	00
8	2221/61	do do ...	175	00
9	2311/61	do do ...	230	00
10	2421/61	do do ...	175	00
11	2683/61	do do	160	00
12	3525/61	do do ...	900	00
13	1018/60	ವಿ. ಗಣಪತಿ ಪೈ, ವಿ. ಸುಬ್ರಾಯ ಪೈಯವರ ಮಗ, ಹರಿದಾಸ್ ಲೇನ್, ಮಣ್ಣಗುಡ್ಡೆ, ಮಂಗಳೂರು....	600	00
14	1293/60	ಇಸ್ಮಾಯಿಲ್ ಹಮ್ಮಬ್ಬ, ಮೀನು ವ್ಯಾಪಾರಿ, ಮುಕ್ಕಚ್ಚೇರಿ, ಉಳ್ಳಾಲ....	45	00
15	2921/60	ಡಿ. ಹಿರಿಯಣ್ಣ ನಾೖಕ್, ವೆಂಕಪ್ಪ ನಾೖಕರ ಮಗ, ಹರೇಕಳ-ಗ್ರಾಮ, ಪೋಸ್ಟ್ ಹರೇಕಳ...	125	00
16	2958/60	ಬಿ. ಮೊಹಮ್ಮದ್, ಬಿ. ಅಬ್ದುಲ್ ಖಾಧರ್‌ರವರ ಮಗ, ಬಂಡಸಾಲೆ ಮನೆ, ಪೋಸ್ಟ್ ಬೋಲಿಯಾರ್-ವಯಾ-ಮಂಜೇಶ್ವರ. (ಕೇರಳ)...	300	00
17	3265/60	do do ...	250	00
18	3445/60	ಬಿ. ವೆಂಕಟೇಶ ಬಾಳಿಗ, ದಾಸ ಬಾಳಿಗರ ಮಗ, ಅನ್ಸಾರಿ ರಸ್ತೆ ಮಂಗಳೂರು.....	125	00
19	3675/60	ಎಚ್. ಪದ್ಮನಾಭ, ಕೆ. ಕೊರಗಪ್ಪರವರ ಮಗ, ರಾಮಕಾಂತಿ ಟಾಕೀಸ್, ಮಂಗಳೂರು...	20	00
20	3992/60	ಅಬ್ದುಲ್ ಖಾದರ್, ಮೊಹಮ್ಮದ್ ಕುಂಞಿಯವರ ಮಗ, ಜೋಕ್ಸ್ ಮರ್ಚಂಟ್ಸ್, ಬೀಬಿಅಲಾಬಿ ರಸ್ತೆ, ಮಂಗಳೂರು....	35	00
21	4156/60	ವಾಸು, ಗಂಗಯ್ಯರವರ ಮಗ, ಬೀಡಿ ಪೇಕರ್, ಚರ್ಚಿನ ಬಳಿ, ಬಿಜೈ, ಮಂಗಳೂರು.4....	140	00
22	4280/60	ಕೆ. ನಾರಾಯಣ ಶೆಟ್ಟಿ, ಬಾಳಪ್ಪ ಶೆಟ್ಟಿಯವರ ಮಗ, ಡ್ರೈವರ್, ಕೊಡಿಯಾಲ್‌ಬೈಲ್, ಮಂಗಳೂರು....	200	00
23	4668/60	ಬಿ. ಉಮ್ಮರಬ್ಬ, ಬಿ. ಜಕ್ರಿಬ್ಯಾರಿಯವರ ಮಗ, ಬಜ್ಪೆ ಪೋಸ್ಟ್, ದ. ಕ....	225	00
24	571/61	ಮೊಹಮ್ಮದ್, ಸೂಪಿಯವರ ಮಗ, ಗನ್ನಿ ಮರ್ಚಂಟ್, ಕೋಟೆಕನಿ, ಅಜಿಜುದ್ದೀನ್ ರಸ್ತೆ, ಮಂಗಳೂರು....	38	00
25	1020/61	ಮೊಹಮ್ಮದ್, ಮೈದಿನ್‌ರವರ ಮಗ, ನಡುಪಳ್ಳಿಯ ಬಳಿ, ಕುದ್ರೋಳಿ, ಮಂಗಳೂರು.3....	70	00
26	1325/61	ಸಿ. ಅಬ್ದುಲ್‌ಹಮೀದ್, ಸಿ. ಮೊಹಮೂದ್‌ರ ಮಗ, ವ್ಯಾಪಾರಿ, ಬಂದರ, ಮಂಗಳೂರು....	9,400	00
27	1707/61	ರುಫಿನ್ ವೇಗಸ್, ಆರ್ಥರ್ ವೇಗಸ್‌ರ ಹೆಂಡತಿ, ತಣ್ಣೀರು ಬಾವಿ ಪೋಸ್ಟ್, ದ. ಕ....	20	00
28	1873/61	ಮೊಹಮೂದ್, ಅಚ್ಚ ಬ್ಯಾರಿಯವರ ಮಗ, ಬೋಟ್‌ಮೇನ್, ಮುನ್ನೂರು ಗ್ರಾಮ, ಒಬ್ಬ ಮೊಗ್ರು ಪೋಸ್ಟ್, ದ. ಕ....	180	00
29	1892/61	ರಮಾನಾಥ ಮಲ್ಯ, ಮಂಜುನಾಥ ಮಲ್ಯರ ಮಗ, ಮುಖ್ಯಪ್ರಾಣ ದೇವಸ್ಥಾನ ರಸ್ತೆ, ಮಂಗಳೂರು.....	125	00
30	2089/61	ಹುಸೈನ್, ಹಸನಬ್ಬರವರ ಮಗ, ಸುಣ್ಣ ವ್ಯಾಪಾರಿ, ಮೇಲಂಗಡಿ, ಉಳ್ಳಾಲ ಪೋಸ್ಟ್, ದ. ಕ....	80	00
31	2212/61	ಇಸ್ಮಾಯಿಲ್, ಅಬ್ದುಲ್ ಖಾದರ್‌ರವರ ಮಗ, C/o ಎಸ್. ಗೋಪಾಲ ಕಾಮತ್, ಫೆಲಿಕ್ಸ್ ಪೈ ಬಜಾರ್, ಮಂಗಳೂರು....	60	00
32	2418/61	ಯು. ಅಬ್ದುಲ್ ಖಾಧರ್, ಹಸನ್‌ಕುಟ್ಟಿರವರ ಮಗ, ವಸ್ತ್ರ ವ್ಯಾಪಾರಿ, ಕೋಟೆಕಾರ್ ಪೋಸ್ಟ್, ದ. ಕ....	900	00
33	2422/61	ಮೊಹಮ್ಮದ್, ಮೊೈದಿನ್‌ರವರ ಮಗ, ನಡುಪಳ್ಳಿಯ ಬಳಿ, ಕುದ್ರೋಳಿ, ಮಂಗಳೂರು-3....	200	00
34	2470/61	ಕೆ. ಯಂ. ಮೊೈದಿನ್, ಪೋಕರ್‌ಕುಟ್ಟಿಯವರ ಮಗ, C/o ಎಸ್. ಕೆ. ಸಿ. ಸಿ. ಎ. ಎಂ. ಎಸ್. ಲಿಮಿಟೆಡ್, ಬಂದರ, ಮಂಗಳೂರು....	110	00
35	2511/61	ಎ. ಹಮೀದ್, ಅಡ್ಯಾರ್ ಅಹಮ್ಮದ್ ಹಾಜಿಯವರ ಮಗ, ವ್ಯಾಪಾರಿ, ಅಡ್ಯಾರ್ ಪೋಸ್ಟ್, ದ. ಕ....	175	00

Office of the Bank,
Car Street, Mangalore,
10—1—1963

N. KESHAVA SHENOI,
MANAGER.

ಪ್ರೇಮಪಾಶ
ಅಥವಾ
ಹೆಡ್ಡ ತಿಮ್ಮ

"ಪ್ರೇಮಪಾಶ" ಅಥವಾ "ಹೆಡ್ಡ ತಿಮ್ಮ" ನಾಟಕವು, ಸುಮಾರು ಇಪ್ಪತ್ತೈದು ವರ್ಷಗಳಿಗೂ ಹಿಂದೆ ಶ್ರೀ ಕೋಲ್ ಸಾಂತಪ್ಪನವರು ರಚಿಸಿದ ಕೃತಿ, ಇದು ನಾಲ್ಕೈದು ಹೆಸರುಗಳಿಂದ ಅನೇಕ ನಾಟಕ ಮಂಡಲಿಗಳಿಂದಲೂ ಎಮೆಚ್ಯೂರ್ ಮಂಡಲಿಗಳಿಂದಲೂ ನೂರಾರು ಬಾರಿ ರಂಗಭೂಮಿಗೆ ತರಲ್ಪಟ್ಟಿದೆ. 18-20 ವರ್ಷಗಳ ಹಿಂದೆ ಶ್ರೀ ಬಿ. ನರ್ಸಪ್ಪನವರು ಇದನ್ನು ಪ್ರಥಮತಃ ತಾವೇ ದಿಗ್ದರ್ಶಿಸಿ ತಾವೇ ನಟಿಸಿ, ರಸಿಕರನ್ನಾಕರ್ಷಿಸಿದ್ದರು. ಭೋಳೆ ಸ್ವಭಾವದ ಹೆಡ್ಡತಿಮ್ಮನಾಗಿ ಶ್ರೀ ನರ್ಸಪ್ಪನವರು ನಾಟಕದುದ್ದಕ್ಕೂ ಮುಖ್ಯ ಆಕರ್ಷಣವಾಗಿ ತನ್ನ ಅಧಿಕಾರವನ್ನು ಸ್ಥಾಪಿಸುತ್ತಾರೆ. ನಾಟಕಕಾರನ ಬರಹದಲ್ಲಿ ಅಡಗಿದ್ದ ಹೆಡ್ಡತಿಮ್ಮನು ಇವರಲ್ಲಿ ಜೀವತುಂಬಿಕೊಂಡು, ಒಂದು ಪ್ರತ್ಯೇಕ ಹಾಗೂ ಪೂರ್ಣ ಸಜೀವ ಪಾತ್ರವಾಗಿ ನಿಲ್ಲುತ್ತಾನೆ. ಈ ಪಾತ್ರನಿರೂಪಣೆಯಲ್ಲಿ ಇವರನ್ನು ಕೆಲವೇ ನಟರು ಮಾತ್ರ ಸರಿಗಟ್ಟಬಲ್ಲರು.

'ಪ್ರೇಮಪಾಶ' ನಾಟಕವು ಕಳೆದ ರವಿವಾರ (ತಾ. 6) ಡೋನ್‌ಬೋಸ್ಕೋ ನಾಟಕಗೃಹದಲ್ಲಿ ಕಿಕ್ಕಿರಿದ ಪ್ರೇಕ್ಷಕವೃಂದದ ಮುಂದೆ ಪ್ರದರ್ಶಿಸಲ್ಪಟ್ಟಿತು; ಮೆಚ್ಚುಗೆ ಗಳಿಸಿತು.

ದ್ರವ್ಯಲೋಭದಿಂದ ರಂಗಪ್ಪನೆಂಬವನು ತನ್ನ ಸೋದರಳಿಯ ತಿಮ್ಮನಿಗೆ, ಕಾಲೇಜ್ ವಿದ್ಯಾಭ್ಯಾಸ ಮಾಡುತ್ತಿದ್ದ ತನ್ನ ಮಗಳನ್ನು ಲಗ್ನ ಮಾಡಿ ಕೊಡುತ್ತಾನೆ. ನಗರದ ಬೆಡಗಿನಲ್ಲಿದ್ದ ಆಕೆ, ತಾಳಿ ಕಟ್ಟಿದ ಈ ಪ್ರಾಣಿಯನ್ನು ತಾಳಿಕೊಂಡಿರಲಾರದೆ ತಾನು ಮೆಚ್ಚಿದವನೊಬ್ಬನ ತೋಳುಗಳಿಗೆ ಹಾರುತ್ತಾಳೆ; ಮತ್ತೆ ಕೆಲಕಾಲದೊಳಗೇ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ಉತ್ತಮ ಸಾಹಿತ್ಯದ ದೃಷ್ಟಿಯಲ್ಲಿ ಈ ನಾಟಕಕ್ಕೆ ಸ್ಥಾನಕೊಡಬರುವುದಿಲ್ಲ. ಈ ನಾಟಕಕಾರರು ಮನಶ್ಶಾಸ್ತ್ರದ ಲವಲೇಶವನ್ನೂ ತಿಳಿದವರಲ್ಲವೆಂದು ಅವರು ರಚಿಸಿದ ಪಾತ್ರಗಳಿಂದ ಮತ್ತು ನಾಟಕದೊಳಗಿನ ಸಂವಾದಗಳಿಂದ ಸ್ಪಷ್ಟವಾಗುತ್ತದೆ. ನಾಟಕದ ಕಥಾವಸ್ತುವೂ ಆಳವಿಲ್ಲದುದು. ಈ ವಿಷಮ ವಿವಾಹವು ದುರಂತದಲ್ಲಿ ಪರ್ಯವಸಾಯಿಯಾಗುವುದಾದರೂ, ದುರಂತಕ್ಕಿಂತ ಇಲ್ಲಿ ಹಾಸ್ಯಕ್ಕೆ ಪ್ರಾಧಾನ್ಯ ಕೊಡಲಾಗಿದೆ. ಒಲ್ಲದ ನಲ್ಲನನ್ನು ಪಡೆದ ಹೆಣ್ಣಿನ ಮನೋವೇದನೆಯು ಇಲ್ಲಿ ಚಿತ್ರಿಸಲ್ಪಟ್ಟಿಲ್ಲ — ಬದಲಾಗಿ, ಅವಳನ್ನು ಸ್ವೈರಿಣಿ ಎಂದು ಬಣ್ಣಿಸಿ, ಪ್ರೇಮದ ಪಾಶದಲ್ಲಿ ಹಿಡಿದೊಯ್ದು ಹಗ್ಗದ ಪಾಶದಲ್ಲಿ ನಾಟಕಕಾರನು ಕೊನೆಗಾಣಿಸಿದ್ದಾನೆ. ಇಲ್ಲಿ, ಈ ಹೆಣ್ಣಿಗಾಗಿ ಮರುಕಪಡುವವರಿಲ್ಲ. ಸಹಾನುಭೂತಿಯು ತಿಮ್ಮನ ಕಡೆಗೆ ಮಾಲುತ್ತದೆ. ಈ ನಡುವೆ ಸುರಾಪಾಯಿಯ ಒಂದು ಸಂಸಾರವನ್ನು ನಾಟಕಕಾರರು ತಂದು ಜೋಡಿಸಿದ್ದಾರೆ; ಗಡಕರಿಯವರ "ಏಕಚ್ ಪ್ಯಾಲಾ"ದಿಂದಲೇ ಈ ಅಂಶವನ್ನು, ಕೆಲವು ಬದಲಾವಣೆಗಳಿಂದ ತಂದಿದ್ದಾರೆ, ಕೆಲವೆಡೆ 'ಏಕಚ್ ಪ್ಯಾಲಾ'ದೊಳಗಿನ ಮಾತುಗಳೇ ಇರಿಸಲ್ಪಟ್ಟಿವೆ. ಅಸಹಜತೆಗಳು ಅಲ್ಲಲ್ಲಿ ಎದ್ದು ಕಾಣುತ್ತವೆ.

ನಾಟಕ ಕೃತಿಯಲ್ಲಿ ಇಂಥ ಹಲವು ದೋಷಗಳಿದ್ದರೂ, ಪಾತ್ರಧಾರಿಗಳು ತೃಪ್ತಿಕರವಾಗಿ ನಿರ್ವಹಿಸಿದ್ದಾರೆ. ಶ್ರೀ ನರ್ಸಪ್ಪನವರ ಪಾತ್ರವು ಈ ನಾಟಕದ ಜೀವಾಳವಾಗಿ ನಿಂತಿದೆ. ಕೆಲವೆಡೆಗಳಲ್ಲಿ ಶ್ರೀ ನರ್ಸಪ್ಪನವರ ಅಭಿನಯವು ಅತ್ಯುತ್ತಮವಾಗಿದೆ. ಈ ಪಾತ್ರವೊಂದು ಪ್ರತ್ಯೇಕವಾಗಿ ಪ್ರೇಕ್ಷಕರ ಹೃದಯದಲ್ಲುಳಿಯುತ್ತದೆ. ಶ್ರೀ ಇಂದುಶೇಖರ್ ಮತ್ತು ಶ್ರೀ ಎಸ್. ಆರ್. ಬಾಲಗೋಪಾಲ್ ಇವರು ಉಲ್ಲಾಸಕರವಾಗಿ ಅಭಿನಯಿಸಿ, ತಮಗೊಪ್ಪಿಸಿದ ಪಾತ್ರಗಳಿಗೆ ನ್ಯಾಯವನ್ನುಂಟುಮಾಡಿದ್ದಾರೆ. ಶ್ರೀ ಪಿ. ಜಗತ್ಪಾಲರನ್ನು ನಾವು ಮೊದಲ ಬಾರಿ ರಂಗಭೂಮಿಯ ಮೇಲೆ ನೋಡುತ್ತಿದ್ದೇವೆ-ಇವರು ಅಸಾಧಾರಣ ಅಭಿನಯನೈಪುಣ್ಯವುಳ್ಳವರೆಂದೂ ಸ್ಪಷ್ಟವಾಗಿದೆ. ಕುಮಾರಿ ಯಶೋದಾ, ಈ ಮೊದಲು

[10ನೇ ಪುಟಕ್ಕೆ ಮುಂದರಿದಿದೆ]

ವಿವಾಹ ಕಾಲ ನಿರ್ಣಯ—೪೯

(ಎಂ. ಸುಬ್ರಾಯನ್)

ಶುಕ್ರನಿಂದ ದ್ವಿತೀಯದಲ್ಲಿ ರವಿ ಇದ್ದರೆ ಹೆಂಡತಿಯು ಸೀಮಾ ಮಾತನಾಡುವವಳೂ, ಯಾವಾಗಲೂ ಒಂದಲ್ಲ ಒಂದು ಚಿರಿಪಿರಿಗುಟ್ಟುತ್ತಿರುವವಳೂ ಆಗಿರುವಳು ಇದರಿಂದ ಮನೆಯಲ್ಲಿ ಅವ್ಯವಸ್ಥೆ ಕಂಡುಬರುವುದು. ತನ್ನ ಉದ್ಯೋಗ, ವರ್ತನೆಗಳಲ್ಲಿ ಒಳ್ಳೆಯ ಹೆಸರು ಬರುತ್ತದೆ. ಹೀಗಿದ್ದರೂ ಸಂಸಾರ ರಥ ಉರುಳುತ್ತಿರುವುದು.

ಶುಕ್ರತೃತೀಯದ ರವಿಯು ಕಾಮಾಸಕ್ತಿಯುಳ್ಳ ಹೆಂಡತಿಯನ್ನು ಕೊಡುವನು. ಕುಟುಂಬದ ಕಡೆಗೆ ಗಮನಿಸುಪವಳಲ್ಲ. ಜಗಳ ಕಿರುಕುಳಗಳನ್ನು ತರುವವಳಾಗಿರುವಳು. ಹೀಗಿದ್ದರೂ ಪರಸ್ಪರ ಪ್ರೇಮ ಚೆನ್ನಾಗಿರುತ್ತದೆ. ಒಂದು ಉದ್ಯೋಗವನ್ನು ಎಣಿಸಿದರೆ ಅಥವಾ ಒಂದು ಕೆಲಸಕ್ಕೆ ಹೊರಟರೆ ಬೇರೆ ಕೆಲಸ ಸಂಭವಿಸುತ್ತಿರುವುದು. ಹೆಂಡತಿಯ ಸಹೋದರರಿಗೆ ಸಹಾಯಿಸಬೇಕಾಗುತ್ತದೆ. ಪುರುಷ ಪ್ರವೃತ್ತಿಯ ಶಿಕ್ಷಿತಳಾದ ಹೆಂಡತಿಯು ಸಿಗುವಳು

ಚಂದ್ರಶುಕ್ರ ಯುತಿಯ ಪೂರ್ಣ ಫಲವು ಸೂರ್ಯನಿಂದ ಅರುವತ್ತು ಅಂಶ ಮುಂದಿದ್ದರೆ ಮಾತ್ರ ಉಂಟಾಗುವುದು. ಇಂತಹನು ಶೃಂಗಾರ ಪ್ರಿಯನಿದ್ದು ಕಾಮಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸಮಾಡಿದನಾಗಿರುವನು. ಸ್ತ್ರೀ ಭೋಗ ಸುಖಗೊಳ್ಳ ಹೊರಟರೆ ಚೆನ್ನಾಗಿ ಅನುಭೋಗಗೊಳ್ಳುವನು. ಅಲ್ಲವಾದರೆ ಜ್ಞಾನ ರೀತಿಯ ಭೋಗ ಸುಖಕ್ಕಿಳಿಯುವನು. ಗಾಯನ ವಾದನ, ನರ್ತನ, ಚಿತ್ರಕಲೆಗಳಲ್ಲಿ ಆಸಕ್ತಿಯುಳ್ಳವನಾಗಿರುವನು. ಮಾತು ಶಿಸ್ತಿನಿಂದ ಕೂಡಿದ್ದಾಗಿರುವುದು. ಅನ್ಯೋನ್ಯ ಪ್ರೇಮ ದಂಪತಿಗಳೆಲ್ಲ ಚೆನ್ನಾಗಿರುವುದು ಸಮಾನತೆಯ ನೆಲೆಯಿಂದಿರುವ ಪ್ರೇಮವಾಗಿರುವುದು. ಸಮಾನ ಭೂಮಿಕೆಯ ಪ್ರೇಮವೆಂದು ಇದನ್ನು ತಿಳಿಯಬಹುದಾಗಿದೆ. ಅನ್ಯೋನ್ಯ ಆದರ ಪ್ರೇಮಗಳು ಚೆನ್ನಾಗಿರುತ್ತವೆ. ಊಟ ಉಪಚಾರಗಳನ್ನು ಅಂದಂದು ತಾವು ಎಣಿಸಿದುದನ್ನು ಮಾಡಿಕೊಳ್ಳುವರು. ಮತ್ತು ಮನೆಯಲ್ಲಿ ಕಾರಣಾಂತರಗಳಿಂದ ಇಚ್ಛಿಸಿದ ಆಹಾರವು ಗೆಳೆಯರಲ್ಲಿ ಅಥವಾ ಬಂಧು ವರ್ಗದವರಲ್ಲಿ ಹೊಂದುವರು.

ಗುರು ಶುಕ್ರಯುತಿಯಾಗಿದ್ದರೆ ಯಾರ ಜಾತಕದಲ್ಲಿ ಗುರು ಶುಕ್ರಯುತಿಯಾದುದೆಂದು ನೋಡಿಕೊಳ್ಳಬೇಕು. ಗುರು ಶುಕ್ರಯುತಿಯುಳ್ಳವರು ಕಾಮಾಸಕ್ತರಿರುವರು. ಮತ್ತು ಸರ್ವಾಂಗ ದರ್ಶನಾಭಿಲಾಷೆಯುಳ್ಳವರು ತಮ್ಮ ಎಣಿಕೆಯಂತೆ ಕಾಮವನ್ನು ಪೂರ್ಣಗೊಳಿಸುವರು. ಮಾತ್ರವಲ್ಲದೆ ಅಂಗಮರ್ದನ ಕಾಮೋಪಚಾರಕರ್ಮಗಳನ್ನು ನೆರವೇರಿಸುವುದರೊಂದಿಗೆ ದೇಹಸೌಷ್ಟವ ಕರ್ಮೋಪಚಾರಗಳನ್ನು ಮಾಡುವರು. ಗುರು ಶುಕ್ರಯುತಿಯಾಗಿದ್ದರೆ ತಂದೆಯ ಸಹೋದರೀ ವರ್ಗದಲ್ಲಿ ಅನಿಷ್ಟ ಕಾಣುವುದು. ಸೋದರ ಅತ್ತೆಯ ಹೆಣ್ಣು ಮಕ್ಕಳು ದಾಂಪತ್ಯ ಸುಖ, ಸಂತಾನ ಸುಖಗಳನ್ನು ಹೊಂದದಿರುವುದು ಇದೆ. ಗಂಡು ಮಕ್ಕಳೂ ಸಂತಾನ ಸುಖಹೀನರಾಗುವುದು, ಅಥವಾ ಭಾಗ್ಯಸುಖ ಹೀನರಾಗುವುದೂ ಇದೆ. ಸಂಪತ್ತು ಇದ್ದರೆ ಮಕ್ಕಳಿಲ್ಲ. ಮಕ್ಕಳಿದ್ದರೆ ಸಂಪತ್ತಿಲ್ಲ. ಈ ರೀತಿಯ ಘಟನೆಯೂ ಕಾಣುವುದಿದೆ. ಸೋದರ ಅತ್ತೆಯ ಮಕ್ಕಳು ಅಲ್ಪಾಯುಸ್ಸಿನವರಾಗಿ (ಸಂತಾನ ಶೋಕ) ಪುತ್ರಶೋಕ ಫಲಾನುಭವವನ್ನು ಹೊಂದುವುದೂ ಇದೆ.

ಗುರು ಶುಕ್ರಯುತಿಯಾಗಿದ್ದರೆ ವಿಷಯಾಸಕ್ತಿ ಅಲ್ಪ ದೇಹದಲ್ಲಿರುವುದು. ಜೀವನ ಸುಖವಾಗಿ ನಡೆಯುವುದು. ಉದ್ಯೋಗವ್ಯವಸಾಯ ಸುಖವಾಗಿ ನಡೆಯುತಿದ್ದು ಯಾವ ಕೊರತೆಯನ್ನೂ ಸಂಪತ್ತಿನಿಂದ ಹೊಂದುವುದಿಲ್ಲ. ಮಕ್ಕಳು ಒಳ್ಳೆಯವರಾಗಿರುವುದಿಲ್ಲ. ಮುಂದಿನ ಪೀಳಿಗೆ ವಿಲಾಸ ಭೋಗ, ಆಲಸ್ಯ, ವ್ಯಭಿಚಾರ, ಅತ್ಯಂತ ವಿಷಯಾಸಕ್ತಿ, ನಿರುದ್ಯೋಗಗಳಿಂದ ಕೂಡಿ ಹೆತ್ತವರ ಹೆಸರಿಗೆ ಯೋಗ್ಯವಾಗಿರುವುದಿಲ್ಲ. ಈ ದೋಷನಿವಾರಣೆಗೆ ದುರ್ಗಾಸೇವೆ ಗಣಪತಿ ಪ್ರೀತಿಗಳು ಮುಖ್ಯಗಳಾಗುತ್ತವೆ.

ಚಂದ್ರ ಶುಕ್ರಯುತಿ ಪೂರ್ವದಿಕ್ಕಿನದ್ದಾದರೆ ದುರಾಚಾರ, ದುರ್ವ್ಯಸನಗಳಿಂದ ದೂರವಾಗಿರುವರು. ಹರ್ಷ ಸ್ವಭಾವಯುಕ್ತರಾಗಿದ್ದು, ನಡತೆ ಮಾತುಗಳಲ್ಲಿ ಸೌಂದರ್ಯ ಮಾಧುರ್ಯಗಳನ್ನು ತುಂಬುವರು. ಉಡುಪಿನಲ್ಲಿ ಸ್ವಚ್ಛತೆ, ವಿಲಾಸಾಸಕ್ತಿ ಭೋಗಸುಖಗಳಿಂದ ದೂರವಾಗಿರುವಿಕೆಗಳು ಕಂಡುಬರುವವು. ವಿಶ್ವಾಸಕ್ಕೆ ಯೋಗ್ಯರಾಗಿರುವರು. ಪರಿಶ್ರಮಿಗಳಾಗಿರುವುದಿಲ್ಲ. ಪ್ರಯತ್ನ ಮಾಡಬೇಕೆಂದು ಹೇಳುವರು. ಪ್ರವಾಸದ ಕಡೆಗೆ ಗಮನ ಇರುತ್ತದೆ. ತುಂಬಾ ಪ್ರವಾಸಮಾಡಬೇಕೆಂಬ ಹಂಬಲವಿರುತ್ತದೆ. ಜ್ಞಾನರೀತಿಯ ಆದರ ಪ್ರೇಮ ನಿಯಮ ರೀತಿಯ ಭೋಗ ಸುಖಗೊಳ್ಳುವವರಾಗಿರುವರು. ತಿಳಿಗೇಡಿತನದ ಭೋಗ ಸುಖವಿರುವುದಿಲ್ಲ ಜನರೊಡನೆ ಕಲೆತು ವರ್ತಿಸುವವರಲ್ಲ. ಮಾತೂ ಅಂತೆಯೇ ಇರುವುದು. ಸಿರ್ಲಿಪ್ತ ವರ್ತನೆ ತೋರುತ್ತಿರುವುದು. ಪ್ರೇಮ, ದಯೆ, ಸುಸ್ವರೂಪ, ಸೌಂದರ್ಯಭರಿತಳಾದ ಯೋಗ್ಯ ಹೆಂಡತಿಯ ಸುಖಲಾಭವಾಗುವುದು, ಆಕೆ ಕುಟುಂಬ ಜೀವನಕ್ಕೆ ಯೋಗ್ಯಳಾಗಿರುವಳು, ಕುಟುಂಬವನ್ನು ಉತ್ತಮ ರೀತಿಯಿಂದ ನಡೆಯಿಸುವವಳಾಗಿರುವವಳು. ಅನ್ಯೋನ್ಯ ಮಾತುಕತೆ ನಿಯಮಿತ ರೀತಿಯಿಂದ ಇರುವುದು. ಹದಮೀರಿದ ಮಾತಿರದು. ಸಂತಾನ ಸುಖಪ್ರಾಪ್ತಿಗೆ ಕಷ್ಟವಾಗುತ್ತಿರುವುದು. ಸಮಾನತೆಯ ನೆಲೆಯ ಪ್ರೇಮ ಕಂಡುಬರುವುದು. ಗಾಯನ, ವಾದನ; ನರ್ತನ, ಚಿತ್ರಕಲೆ, ಬಣ್ಣಗಾರಿಕೆ, ಛಾಯಾಚಿತ್ರ ವಿಷಯಗಳಲ್ಲಿ ನೈಪುಣ್ಯಯುಕ್ತರಾಗಿರುವರು. ಒಳ್ಳೆಯ ಹೆಸರನ್ನು ಈ ವಿಷಯದಲ್ಲಿ ಹೊಂದುವರು. ದಾಂಪತ್ಯಜೀವನಕ್ಕೆ ವಿಳಂಬವೂ ಆಗುವುದಿದೆ. ಚಂದ್ರ ಶುಕ್ರರು ಪೂರ್ವ ದಿಕ್ಕಿನ ಯುತಿಗೊಂಡವರಾದರೆ ಅವರಿಗೆ ಕುಜ ಶನಿಗಳ ಸಂಪರ್ಕ ಹೇಳಿದೆಯೆಂದು ನೋಡಿಕೊಳ್ಳಬೇಕು. ಕುಜ ಶನಿಗಳ ಸಂಪರ್ಕ ದೃಷ್ಟಿಯೋಗದಿಂದ ಭಿನ್ನ ಫಲಪ್ರಾಪ್ತಿಯುಂಟಾಗುತ್ತದೆ;

—— [ಸಶೇಷ]

"ಏಕಚ್ ಪ್ಯಾಲಾ" ನಾಟಕ ಪ್ರದರ್ಶನ.

ಧನಸಂಗ್ರಹದಲ್ಲೊಂದು ದಾಖಲೆ.

ರಾಷ್ಟ್ರೀಯ ರಕ್ಷಣಾ ನಿಧಿಯ ಬಗ್ಗೆ ನಿಧಿ ಸಂಗ್ರಹಮಾಡಲು, ತಾ. 5-1-63 ನೇ ಶನಿವಾರ ರಾತ್ರೆ 9ಕ್ಕೆ, ಸ್ಥಳೀಯ ಡೊನ್ ಬೊಸ್ಕೋ ಸಭಾಭವನದಲ್ಲಿ, ಮಂಗಳೂರಿನ ಕಲಾಭವನ ಮತ್ತು ರೋಟರಿ ಕ್ಲಬ್-ಈ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಅಭಿನಯಿಸಲ್ಪಟ್ಟ "ಏಕಚ್ ಪ್ಯಾಲಾ" ಅಥವಾ "ಒಂದೇ ಗುಟುಕು" ನಾಟಕವು, ಒಂದೇ ನಾಟಕದಿಂದ ಸಂಗ್ರಹವಾದ ನಿಧಿಯ ಮಟ್ಟಿಗೆ ಮಂಗಳೂರಿನಲ್ಲಿ ಹೊಸ ದಾಖಲೆ ಸ್ಥಾಪಿಸಿತು. ಈ ನಾಟಕದಿಂದ ಸಂಗ್ರಹವಾದ ರೂಪಾಯಿ 12,500ವನ್ನು, ಕಲಾಭವನದ ಅಧ್ಯಕ್ಷರಾಗಿರುವ ಶ್ರೀ। ಯು ರಾಮನಾಯ್ಕರವರು, ರಕ್ಷಣಾ ನಿಧಿಗೆ ಕಳಿಸಲು, ಶ್ರೀ। ಮಣೇಲ ಶ್ರೀನಿವಾಸ ನಾಯ್ಕ, ಎಮ್. ಎಲ್. ಎ., ಇವರ ವಶಕ್ಕೊಪ್ಪಿಸಿದರು. ಶ್ರೀ। ಶ್ರೀನಿವಾಸ ನಾಯ್ಕರು ರೂ. 12,500ದ ಚೆಕ್ಕನ್ನು ಸ್ವೀಕರಿಸುತ್ತ, ರೋಟರಿ ಕ್ಲಬ್ ಮತ್ತು ಕಲಾಭವನದವರ ಈ ಜಂಟಿ ಯತ್ನವನ್ನೂ, ನಾಟಕದಲ್ಲಿ ಭಾಗವಹಿಸಿದವರ ಕಲಾ ಪ್ರೌಢಿಮೆಯನ್ನೂ ಪ್ರಶಂಸಿಸಿದರು. ರೋಟರಿ ಕ್ಲಬ್ಬಿನ ಪರವಾಗಿ ಶ್ರೀ। ಯು. ರಾಜಾರಾಮ ಮಲ್ಯ, B.A., B.L., ಅವರೂ, ಕಲಾಭವನದ ಪರವಾಗಿ ಶ್ರೀ। ಎಸ್. ಆರ್. ಬಾಲಗೋಪಾಲ್‌ರವರೂ ಧನ್ಯವಾದಗಳನ್ನರ್ಪಿಸಿದರು.

'ಏಕಚ್ ಪ್ಯಾಲಾ' ನಾಟಕದಲ್ಲಿ ಕಲಾಭವನದ ನಟರು ಕೆಲವರೂ, ರೋಟರಿ ಕ್ಲಬ್ಬಿನ ಕೆಲವು ಸದಸ್ಯರೂ ಪಾತ್ರವಹಿಸಿದ್ದರು. ಶ್ರೀ। ಎಮ್. ಇಂದುಶೇಖರ್-ಸುಧಾಕರನಾಗಿಯೂ, ಶ್ರೀ। ಕೆ. ಆರ್. ಕಿಣಿ, B. Sc. ಯವರು ಸಿಂಧುವಾಗಿಯೂ, ಶ್ರೀ। ಎಸ್. ಆರ್. ಬಾಲಗೋಪಾಲ್‌ರವರು ತಳಿರಾಮನಾಗಿಯೂ, ಡಾ। ಎಮ್. ಡಿ. ಅಡಪ್ಪನವರು ಪದ್ಮಾಕರನಾಗಿಯೂ, ಶ್ರೀ। ಯು. ರಾಜಾರಾಮ ಮಲ್ಯರು ಭಗೀರಥನಾಗಿಯೂ, ಶ್ರೀ। ಬಿ. ವಿ. ಬಾಳಿಗರವರು ರಾಮಲಾಲನಾಗಿಯೂ ಶ್ರೀ। ಎಚ್. ಕುಮಾರಸ್ವಾಮಿಯವರು ಗೀತಾ ಮತ್ತು ಶ್ರೀ। ಕೆ. ವೆಂಕಟರಾವ್‌ರವರು ಶರದು ಆಗಿಯೂ ಪಾತ್ರವಹಿಸಿದ್ದರು. ಸಹಾಯಕಪಾತ್ರಗಳಲ್ಲಿ ಶ್ರೀ। ಮಣೇಲ ಕೃಷ್ಣ ನಾಯಕ್ (ಖುದಾ ಭಕ್ತ), ಶ್ರೀ। ಬಾಬು ಶೆಟ್ಟಿ (ಶಾಸ್ತ್ರಿ), ಶ್ರೀ। ಸೆವಗೂರ್ ರಾಮಚಂದ್ರ ಕಾಮತ್ (ಯಲ್ಲಪ್ಪ), ಶ್ರೀ। ವಾಸುದೇವ ಕಿಣಿ-ಫೌಜದಾರ (ಮತ್ತು ಎರಡನೇ ಗೃಹಸ್ಥ), ಶ್ರೀ। ಎಮ್. ಜಿ. ಕಾಮತ್ (ಜನಿಯ), ಶ್ರೀ। ಎಸ್. ಎಸ್. ಕಿಣಿ, ಮುನಿಸಿಪಲ್ ಕೌನ್ಸಿಲರ್ (ಮಗಸ), ಶ್ರೀ। ಎಲ್. ನರಸಿಂಹಯ್ಯ (ಮನಿಯಾ), ಶ್ರೀ। ಎಸ್. ಎಸ್. ಭಟ್ (ರಾವ್‌ಸಾಹೇಬ್), ಶ್ರೀ। ಎಸ್. ಜಿ. ಹೆಗ್ಡೆ (ಬಾಬಾ ಸಾಹೇಬ್), ಶ್ರೀ। ಭಗತ್ (ಮೊದಲನೇ ಗೃಹಸ್ಥ), ಶ್ರೀ। ಸಾಹುಕಾರ ಎಮ್. ಬಾಬ ಪೈ—(ಮೂರನೇ ಗೃಹಸ್ಥ) ಶ್ರೀ। ಎಚ್. ಗೋವಿಂದ ರಾವ್ (ನಾಲ್ಕನೆ ಗೃಹಸ್ಥ)—ಹೀಗೆ ಪಾತ್ರವಹಿಸಿ, ಪ್ರೇಕ್ಷಕರ ಲಕ್ಷ್ಯವನ್ನು ಸೆಳೆದಿದ್ದರು.

ಶ್ರೀ। ಎ. ಎಸ್. ಕಾಮತ್ ಮತ್ತು ಶ್ರೀ। ಎಮ್. ಕೃಷ್ಣಗೋಪಾಲ್—ಇವರು ಆರ್ಯಮಂದಿರಾ ಮಂಡಲದ ಮೌನ ಸದಸ್ಯರಾಗಿ, ಮಾತಿಲ್ಲದ ಅಭಿನಯದಿಂದ ತಮ್ಮ ಪಾತ್ರಗಳನ್ನು ನಿರ್ವಹಿಸಿದ್ದರು. ಸಹಾಯಕ ಪಾತ್ರವರ್ಗದಲ್ಲಿ ಶ್ರೀ। ಮಣೇಲ ಕೃಷ್ಣ ನಾಯಕ್, ಶ್ರೀ। ಬಾಬು ಶೆಟ್ಟಿ ಶ್ರೀ। ಕೃಷ್ಣ ಗೋಪಾಲ್ ಮತ್ತು ಶ್ರೀ। ಸೆವಗೂರ್ ರಾಮಚಂದ್ರ ಕಾಮತ್ ಇವರ ಚಟುವಟಿಕೆಗಳು ಪ್ರೇಕ್ಷಕರಿಗೆ ಉಲ್ಲಾಸವನ್ನಿತ್ತುದು ಸ್ಪಷ್ಟವಾಗಿತ್ತು. ತಳಿರಾಮನ ಪಾತ್ರದಲ್ಲಿ ಶ್ರೀ। ಬಾಲಗೋಪಾಲರವರು ಆ ಪಾತ್ರಕ್ಕೊಪ್ಪುವಂತೆ ನಟಿಸಿದ್ದರು. ಶ್ರೀ। ಇಂದುಶೇಖರ್ ಮತ್ತು ಶ್ರೀ। ಕೆ ಆರ್. ಕಿಣಿಯವರು ತಮ್ಮ ಅಭಿನಯದಲ್ಲಿ ಕೆಲವೆಡೆ ಉತ್ತಮ ಅಭಿನಯದ ಔನ್ನತ್ಯಕ್ಕೆ ತಲಪಿದ್ದರು.

ನಾಟಕವನ್ನು ಮರಾಠಿಯಿಂದ ಕನ್ನಡಕ್ಕೆ ತರ್ಜುಮೆ ಮಾಡುವುದರಲ್ಲಿ ಸರಕಾರೀ ಟ್ರೈನಿಂಗ್ ಕೊಲೇಜಿನ ಪ್ರಿನ್ಸಿಪಾಲರಾಗಿರುವ ಶ್ರೀ। ಎಸ್. ಆರ್. ರೋಹಿಡೇಕರ್‌ರವರು ಹಿರಿಯ ಪಾತ್ರವಹಿಸಿದ್ದರು.

ಶ್ರೀ। ಮೋಹನರಾಯರ ರಂಗಸಜ್ಜಿಕೆ ಮಾಸ್ತರ್ ದೇವಾಡಿಗರರ ಹಾರ್ಮೋನಿಯಂ, ಶ್ರೀ। ಗೋಪಿನಾಥ ಗುಲ್ವಾಡಿಯವರ ತಬ್ಲಾ, ನಾಟಕದ ಯಶಸ್ಸಿಗೆ ಸಹಾಯಕವಾಗಿತ್ತು. ತಕ್ಕ ವೇಷಭೂಷೆಗಳನ್ನು ಶ್ರೀ। ಗೋಪಿನಾಥ ಗುಲ್ವಾಡಿಯವರು ಒದಗಿಸಿದ್ದರು.

——

ಮಂಗಳೂರು ರಥೋತ್ಸವ ತಾ. 1—2—63ಕ್ಕೆ

ಬೇರೆ ಬೇರೆ ಪಂಚಾಂಗಗಳಲ್ಲಿ ರಥಸಪ್ತಮಿಯ ಬಗ್ಗೆ ತಿಥಿಯಲ್ಲಿ ವ್ಯತ್ಯಾಸವಿದ್ದು ಈ ಬಗ್ಗೆ ಸ್ಪಷ್ಟೀಕರಣಕ್ಕಾಗಿ ಶ್ರೀ ಕಾಶೀಮಠಾಧೀಶರಲ್ಲಿ ಅಪ್ಪಣೆ ಕೇಳಿದಾಗ, ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನದ ರಥೋತ್ಸವವನ್ನು ಫೆಬ್ರವರಿ ತಾ. 1ರಂದು ಜರಗಿಸಬೇಕೆಂದು ಶ್ರೀ ಗುರುವರ್ಯರು ಅಪ್ಪಣೆ ಕೊಡಿಸಿರುವರೆಂದು ತಿಳಿದುಬರುತ್ತದೆ.

[9ನೇ ಪುಟದಿಂದ ಮುಂದುವರಿದುದು]

ಶ್ರೀ। ನರ್ಸಪ್ಪನವರೊಡನೆ ಈ ನಾಟಕದಲ್ಲಿ ನಾಯಿಕೆಯ ಪಾತ್ರವಹಿಸಿದ್ದವರ ಮಟ್ಟಿಕ್ಕೆ ಮುಟ್ಟಲ್ಲವಾದರೂ ತೃಪ್ತಿಕರವಾಗಿ ಅಭಿನಯಿಸಿದ್ದಾಳೆ.

ಶ್ರೀ। ನರ್ಸಪ್ಪನವರು ಇನ್ನು ಒಳ್ಳೆ ಹೊಸ ಹೊಸ ನಾಟಕಗಳನ್ನಾರಿಸಿ ರಂಗಭೂಮಿಗೆ ತಂದು ಕಲಾಸೇವೆ ಸಲಿಸಬೇಕು ಎಂದು ಕಲಾಪ್ರಿಯರು ಇಚ್ಛಿಸುತ್ತಾರೆ.

—— K. V. S.

ಈ ವಾರದ ಭವಿಷ್ಯ

ಶ್ರೀ ಎಚ್. ಸುಬ್ರಾಯಪ್,
ಸಾಹಿತ್ಯ ಮತ್ತು ಜೋತಿಷ್ಯ ಶಿರೋಮಣಿ.

ತಾರೀಕು ೧೩—೧—೧೯೬೩ರಿಂದ
ತಾ. ೧೯—೧—೧೯೬೩ರ ವರಿಗೆ.

ಮೇಷ: ಎಲ್ಲಾ ಕೆಲಸಗಳೂ ಸಾವಕಾಶವಾಗಿ ಕೊನೆಗೊಳ್ಳುತ್ತವೆ. ಸಂಪತ್ತಿನಿಂದ ಪ್ರಗತಿಯನ್ನು ಹೊಂದಲಿರುವಿರಿ. ದೂರಗತ ಬಂಧುಜನರ ಭೇಟಿ ಸಹಾಯಗಳನ್ನು ಹೊಂದಲಿರುವಿರಿ. ರಿಕಾರ್ಡು ವ್ಯವಹಾರಗಳು ಮುಂದುವರಿಯಲಿರುವವು. ನೌಕರರಿಗೆ ಉತ್ತಮ.

ವೃಷಭ: ಎಲ್ಲಾ ಕೆಲಸಗಳಲ್ಲಿಯೂ ಜಯ ಲಾಭಸಿದ್ಧಿಸುವುದಾದರೂ ಮಾನಸಿಕ ಶಾಂತಿಯು ಅಲ್ಪವಾಗಿಯೇ ಇರುವುದು. ದೇಹಾರೋಗ್ಯದ ವಿಷಯದಲ್ಲಿ ಜಾಗರೂಕತೆಯಿಂದ ಕೂಡಿದವರಾಗಬೇಕು. ಪ್ರಯಾಣದ ಮೂಲಕ ಶುಭ ಸಂಘಟನೆಗೆ ಅವಕಾಶವು ಕಾಣುವುದು.

ಮಿಥುನ: ಜೀವನದಲ್ಲಿ ನವೀನತೆಗಿರುವ ಸಂಪರ್ಕಯುತರಾಗಿ ಕಂಡುಬರುವಿರಿ. ಪುಣ್ಯಕೆಲಸಗಳಿಗೆ ಕೈಯನ್ನು ನೀಡಲಿರುವಿರಿ. ವಾಸಸ್ಥಾನದ ಬದಲಾವಣೆಯ ಕಡೆಗೆ ಗಮನ ಕಂಡುಬರುವುದು. ವ್ಯಾಪಾರಿಗಳು ಉನ್ನತಿಗೊಳ್ಳಲಿರುವರು.

ಕರ್ಕಟಕ: ನಿರಂತರ ಒಂದಲ್ಲ ಒಂದು ಕಿರುಕುಳದ ಯೋಜನೆಯು ಸಾಲಿನಲ್ಲಿ ಬಿದ್ದು ತಲೆ ಶಾಂತಿಯು ಕಡಮೆಯಾಗಿಯೇ ಉಳಿದಿರುತ್ತದೆ. ಬಂಧುವರ್ಗದವರ ವಿಯೋಗವಿರುತ್ತದೆ. ವಾಗ್ವಾದ ಸಂಭವಿಸದಂತೆ ಜಾಗರೂಕರಾಗಿರಬೇಕು. ನೌಕರರು ಪ್ರಗತಿಗೊಳ್ಳುವರು.

ಸಿಂಹ: ಸಾಮಾಜಿಕ ವಿಷಯಗಳಲ್ಲಿ ಆಸಕ್ತಿಯು ಬಹಳವಾಗಿರುತ್ತದೆ. ಹಿಡಿದ ಕೆಲಸಗಳೆಲ್ಲಾ ಅಪೂರ್ಣವಾಗಿಯೇ ತೋರುವವು. ಕುಟುಂಬದ ವಾತಾವರಣವು ಚೆನ್ನಾಗಿರುವುದಿಲ್ಲ. ಪ್ರಯಾಣವನ್ನು ಮಾಡಲಿರುವ ಯೋಗವಿದೆ.

ವಾರದ ಪ್ರಭಾತ ಪಂಚಾಂಗ

ಧನು, ಪುಷ್ಯ-ಬಹುಳ

ತಾರೀಕು	ವಾರ	ತಿಥಿ ಸೌರ	ತಿಥಿ ಚಾಂದ್ರ	ನಿತ್ಯ ನಕ್ಷತ್ರ	ಯೋಗ	ಕರಣ	ವಿಷ	ಅಮೃತ	ಮಹಾನಕ್ಷತ್ರ
13	ರವಿ	೨೯	ಚೌ ೫೮	ಮ ೩೬।	ಅ ೨೪	ಬ ೨೬।।	೪।।- ೫೮।	೩೦	ಉ. ಷಾ ೯।।
14	ಚಂದ್ರ	೩೦	ಪಂ ೬೦	ಹು ೪೧।।।	ಸೌ ೨೪।	ಕೌ ೩೦।	ಶೇ ೨।।	೨೪।।	೧೪
15	ಕುಜ	೧	ಷ ೨।।।	ಉ ೪೮।	ಶೋ ೨೫।	ತೈ ೨।।।	೧।।।	೨೮।	೧೮।।।
16	ಬುಧ	೨	ಷ ೮।	ಹ ೫೫।।	ಅ ೨೭	ವ ೮।	೧೧।।।	೩೮।।।	೨೩।
17	ಗುರು	೩	ಸ ೧೪।।	ಚಿ ೬೦	ಸು ೨೯	ಬ ೧೪।।	೧೮	೪೪।।।	೨೭।।।
18	ಶುಕ್ರ	೪	ಅ ೨೦।।।	ಚಿ ೨।।।	ಧೃ ೩೧	ಕೌ ೨೦।।।	೧೮।।	೪೫।	೩೨।।
19	ಶನಿ	೫	ನ ೨೬।।	ಸ್ವಾ ೯।।।	ಶೂ ೩೨।।	ಗ ೨೬।।	೨೫।	೫೧।।	೩೭

ತಾ. 14 ಮಕರಸಂಕ್ರಮಣ. ತಾ, 17 ವಿವೇಕಾನಂದ ಶತಾಬ್ದಿ.

ಕನ್ಯಾ: ಹೊಸ ವಿಚಾರಗಳಿಂದ ಕೂಡಿದವರಾಗಿದ್ದು ಅವನ್ನು ಕಾರ್ಯತಃ ಕೊನೆಗೊಳಿಸಲಿರುವ ಯತ್ನಯುಕ್ತರಾಗುವಿರಿ. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿಯು ಕಂಡುಬರುವುದಾಗಿದೆ. ದೇಹಾರೋಗ್ಯದ ನೆಲೆಯು ಚೆನ್ನಾಗಿರುವುದಿಲ್ಲ.

ತುಲಾ: ನಿರಂತರ ಕೆಲಸಗಳಿಂದ ಕೂಡಿದವರಾಗಿದ್ದು ವಿರಾಮ ಕಡಿಮೆಯಾಗಿರುವುದು. ಮಾನಸಿಕ ಶಾಂತಿಯು ಕಡಮೆಯಾಗಿರುತ್ತದೆ. ಕುಟುಂಬದಲ್ಲಿ ಶುಭಕೆಲಸಗಳು ನಡೆಯಲಿರುವವು. ವ್ಯಾಪಾರಿಗಳಿಗೆ ಅಭಿವೃದ್ಧಿಯಾಗಲಿದೆ.

ವೃಶ್ಚಿಕ: ಹೊಸ ವಿಚಾರಗಳಿಂದ ಕೂಡಿದವರಾಗಿದ್ದು ಅವನ್ನು ಕಾರ್ಯರೂಪದಿಂದ ಕೊನೆಗೊಳಿಸಲಿರುವ ಯತ್ನಯುಕ್ತರಾಗುವಿರಿ. ವಾಸಸ್ಥಾನದ ಬದಲಾವಣೆಯನ್ನು ಮಾಡಲಿರುವ ಯೋಗವಿರುತ್ತದೆ. ವಾಗ್ವಾದಗಳುಂಟಾಗದಂತೆ ಜಾಗರೂಕರಾಗಿರಬೇಕು.

ಧನು: ಮಾನಸಿಕ ಶಾಂತಿಯು ಕಡಮೆಯಾಗಿರುವುದು. ನಿಮ್ಮವರೇ ನಿಮಗೆ ಹಗೆಗಳಾಗಿ ಕಾಣುವರು. ಪತ್ರವ್ಯವಹಾರಗಳು ಅಧಿಕವಾಗಿರುತ್ತವೆ. ಕುಟುಂಬದಲ್ಲಿ ಶುಭಕೆಲಸಗಳೂ ನಡೆಯಲಿರುವವು.

ಮಕರ: ಹಲವಾರು ಕೆಲಸಗಳಿಂದ ಕೂಡಿದವರಾಗಿದ್ದು ವಿರಾಮಯುಕ್ತರಾಗಿರುವುದಿಲ್ಲ. ಆಪ್ತರೆಯರೇ ನಿಮ್ಮ ಕೆಲಸಗಳಿಗೆ ಅಡ್ಡವಾಗಿ ನಿಲ್ಲುವರು. ಸಂಪತ್ತಿನಿಂದ ಪ್ರಗತಿಯುಳ್ಳವರಾಗುವ ಯೋಗ ವ್ಯಾಪಾರಿಗಳಿಗಿದೆ. ನೌಕರರಿಗುತ್ತಮ.

ಕುಂಭ: ಎಲ್ಲಾ ಕೆಲಸಗಳಗೂ ಅಪೂರ್ಣಗಳಾಗಿಯೇ ಕಂಡುಬರುವುವು. ಬಂಧುಜನರ ಅಗಲಿಕೆಯನ್ನು ಹೊಂದಲಿರುವಿರಿ. ವಾಗ್ವಾದವು ಸಂಭವಿಸದಂತೆ ಜಾಗರೂಕರಾಗಿರಬೇಕು. ನೌಕರರು ಅಭಿವೃದ್ಧಿಗೊಳ್ಳಲಿರುವರು.

ಮೀನ: ನಿರಂತರ ಕೆಲಸಗಳಿಂದ ಕೂಡಿದವರಾಗಿದ್ದು ವಿರಾಮ ಕಡಿಮೆಯಾಗಿರುವುದು. ದೂರಗತ ಬಂಧುಜನರ ಭೇಟಿಯಾಗಲಿದೆ. ವಿದ್ಯಾಜೀವನದವರು ಅಭಿವೃದ್ಧಿಯುಳ್ಳವರಾಗಿ ಕಂಡುಬರಲಿರುವರು.



1962ರ 'ಉತ್ತಮ'ಗಳು

1962ನೇ ಇಸವಿಯು ಚಿತ್ರೋದ್ಯಮದ ದೃಷ್ಟಿಯಿಂದ ಸಾಕಷ್ಟು ಪ್ರೋತ್ಸಾಹದಾಯಕವಾಗಿತ್ತು ಎಂದೇ ಹೇಳಬಹುದು. ಹಿಂದಿ ಚಿತ್ರಗಳ ದೃಷ್ಟಿಯಿಂದ ನೋಡಿದರೆ 1962ನೇ ವರುಷದಲ್ಲಿ ಮನರಂಜಿಸುವ ಚಿತ್ರಗಳೇ ಹೆಚ್ಚಾಗಿದ್ದುವು ಎಂದರೆ ತಪ್ಪಾಗಲಾರದು. ಹಾಗೆಂದು ವಿಚಾರಪೂರಿತ ಚಿತ್ರಗಳು ಇಲ್ಲವೆಂದಲ್ಲ. ಆದರೆ ಅವುಗಳ ಸಂಖ್ಯೆ 1961ನೇ ಇಸವಿಗಿಂತ ಕಡಿಮೆಯಾಗಿತ್ತೆಂದೇ ಹೇಳಬೇಕು. ತಮಿಳು ಚಿತ್ರೋದ್ಯಮಕ್ಕೆ 1962ನೇ ವರ್ಷವು ತೀರಾ ನಿರಾಶಾದಾಯಕವಾಗಿತ್ತು. ಬೆರಳೆಣಿಕೆಯ ಉತ್ತಮ ಚಿತ್ರಗಳು ಬಿಡುಗಡೆಗೊಂಡುವು. ಹೆಚ್ಚಿನ ಚಿತ್ರಗಳು ತೀರಾ ಕೆಳಮಟ್ಟದವುಗಳಾಗಿದ್ದುವು. ಕನ್ನಡ ಚಿತ್ರೋದ್ಯಮವು 1962ರಲ್ಲಿ ಸಾಕಷ್ಟು ಚೇತರಿಸಿಕೊಂಡಿತು. ಕೆಲವು ಚಿತ್ರಗಳು ಬಾಕ್ಸ್ ಆಫೀಸ್ ದೃಷ್ಟಿಯಿಂದ ಯಶಸ್ವಿಯೆನಿಸಿದುವು.

1962ರ 'ಉತ್ತಮ'ಗಳನ್ನು 'ಪ್ರಭಾತ'ವು ಈ ಕೆಳಗಿನಂತೆ ಆಯ್ಕೆಮಾಡಿದೆ.

ಹಿಂದೀ ಚಿತ್ರರಂಗ

ಉತ್ತಮ ಚಿತ್ರ: ಮೈ ಚುಪ್ ರಹೂಂಗಿ.
ಉತ್ತಮ ನಟ: ಶಾಂತಾರಾಂ (ಸ್ತ್ರೀ)
ಉತ್ತಮ ನಟಿ: ಮೀನಾ ಕುಮಾರಿ (ಮೈ ಚುಪ್ ರಹೂಂಗಿ)
ಉತ್ತಮ ಸಹಾಯಕ ನಟ: ನಾನಾ ಪಲ್ಸೀಕರ್ (ಮೈ ಚುಪ್ ರಹೂಂಗಿ).
ಉತ್ತಮ ಸಹಾಯಕ ನಟಿ: ಶಶಿಕಲಾ (ಆರತಿ).
ಉತ್ತಮ ಸಂಗೀತ ನಿರ್ದೇಶಕರು: ಶಂಕರ್ ಜೈಕಿಷನ್ (ಪ್ರೊಫೆಸರ್).
ಉತ್ತಮ ಗಾಯಕ: ಮಹಮ್ಮದ್ ರಫಿ (ಪ್ರೊಫೆಸರ್— ಏ ಗುಲ್‌ಬದನ್).
ಉತ್ತಮ ಗಾಯಕಿ: ಲತಾ ಮಂಗೇಶ್ಕರ್ (ಬೀಸ್ ಸಾಲ್ ಬಾದ್— ಕಹೀಂ ದೀಪ್ ಜಲೆ).
ಉತ್ತಮ ಹಾಸ್ಯ ನಟ: ಮಹಮೂದ್ (ದಿಲ್ ತೇರಾ ದೀವಾನಾ).
ಉತ್ತಮ ನಿರ್ದೇಶಕರು: ಶಾಂತಾರಾಂ (ಸ್ತ್ರೀ).

ತಮಿಳು ಚಿತ್ರರಂಗ

ಉತ್ತಮ ಚಿತ್ರ: ನೆಂಜಿಲ್ ಓರ್ ಆಲಯಂ.
ಉತ್ತಮ ನಟ: ಶಿವಾಜಿ ಗಣೇಶನ್ (ಪಡಿತಾಲ್ ಮಟ್ಟುಂ ಪೋದುಮಾ).
ಉತ್ತಮ ನಟಿ: ಸಾವಿತ್ರಿ (ಪಡಿತ್ತಾಲ್ ಮಟ್ಟುಂ ಪೋದುಮಾ).

ಕನ್ನಡ ಚಿತ್ರರಂಗ

ಉತ್ತಮ ಚಿತ್ರ: ಕರುಣೆಯೇ ಕುಟುಂಬದ ಕಣ್ಣು.
ಉತ್ತಮ ನಟ: ಕಲ್ಯಾಣ ಕುಮಾರ್ (ತಾಯಿ ಕರುಳು).
ಉತ್ತಮ ನಟಿ: ಲೀಲಾವತಿ (ಕರುಣೆಯೇ ಕುಟುಂಬದ ಕಣ್ಣು).

●

ಚಾಂದ್ ಔರ್ ಸೂರಜ್

ಗಂಗಾ ಚಿತ್ರಾರವರ "ಚಾಂದ್ ಔರ್ ಸೂರಜ್" ಚಿತ್ರಕ್ಕಾಗಿ ಕ್ರಮವಾದ ಚಿತ್ರೀಕರಣವು ಸಾಗುತ್ತಲಿದೆ. ಮೊದಲು ಆರು ದಿನಗಳ ಚಿತ್ರೀಕರಣದಲ್ಲಿ ಧರ್ಮೇಂದ್ರ, ತನುಜಾ, ಅಜಿತ್ ಸೇನ್ ಮತ್ತು ಸಜ್ಜನ್ ಭಾಗವಹಿಸಿದ್ದರು. ದುಲಾಲ್ ಗುಹಾರವರಿಂದ ಈ ಚಿತ್ರವು ತಯಾರಿಸಲ್ಪಡುತ್ತಲಿದೆ. ನಿರ್ದೇಶಕರೂ ಅವರೇ; ಅಶೋಕ್ ಕುಮಾರ್ ಮತ್ತು ನಿರೂಪಾ ರಾಯ್ ಮುಖ್ಯ ಪಾತ್ರಗಳಲ್ಲಿದ್ದಾರೆ. ಸಲಿಲ್ ಚೌಧರಿ ಸಂಗೀತ ನಿರ್ದೇಶಕರು.

●

ಹಾಡಿನ ಧ್ವನೀಕರಣ

ಸುಮನ್ ಕಲ್ಯಾಣ್‌ಪುರ್ ಹಾಡಿದ ಹಾಡೊಂದನ್ನು "ಶಗೂನ್" ಚಿತ್ರಕ್ಕಾಗಿ ಧ್ವನೀಕರಿಸಲಾಯಿತು. ಹಾಡನ್ನು ಸಾಹಿರ್ ಲುಧಿಯಾನ್ವಿ ರಚಿಸಿದ್ದಾರೆ. ಖಯ್ಯಾಮ್‌ರವರ ನಿರ್ದೇಶನದಲ್ಲಿ ಧ್ವನಿಮುದ್ರಣವು ನಡೆಯಿತು.

'ಶಗೂನ್'ನಲ್ಲಿ ವಹೀದಾ ರೆಹಮಾನ್ ಮತ್ತು ಕಮಲ್‌ಜೀತ್ ಪ್ರಧಾನ ಪಾತ್ರಗಳಲ್ಲಿದ್ದಾರೆ. ಕಮಲ್‌ಜೀತ್ ನಾನಾ ಪಾಲ್ಸೀಕರ್ ಮತ್ತಿತರರು ಭಾಗವಹಿಸಿದ್ದ ಕೆಲವು ದೃಶ್ಯಗಳನ್ನು ಚಿತ್ರೀಕರಿಸಲಾಯಿತು. ಮೇಲೆ ಹೇಳಿದ ಹಾಡನ್ನು ವಹೀದಾ ರೆಹಮಾನಳ ಮೇಲೆ ಚಿತ್ರೀಕರಿಸಲಾಗುವುದು.

●

ತಾಜ್‌ಮಹಲ್

ಎ. ಕೆ. ನಡಿಯಾದ್‌ವಾಲಾರವರ ಮಹತ್ವಾಕಾಂಕ್ಷೆಯ ಚಿತ್ರ "ತಾಜ್‌ಮಹಲ್" ಚಿತ್ರವು ಸಂಪೂರ್ಣಗೊಂಡಿದೆಯೆಂದೂ ತಿಳಿದುಬಂದಿದೆ. ಚಿತ್ರದ ಹೊರಾಂಗಣ ಚಿತ್ರೀಕರಣ ತಂಡವು ಜಯಪುರ, ಉದಯಪುರ ಮೊದಲಾದ ಸುಂದರ ನಗರಗಳಲ್ಲಿ ಯುದ್ಧದ ದೃಶ್ಯಗಳನ್ನು ಚಿತ್ರೀಕರಿಸಿಕೊಂಡು ಮುಂಬಯಿಗೆ ಮರಳಿಬಂದಿದೆ. ಚಿತ್ರವು ಪೂರ್ಣವಾಗಿ ಈಸ್ಟ್‌ಮನ್ ವರ್ಣದಲ್ಲಿದೆ.

ಬೀನಾರಾಯ್ ಮುಮ್ತಾಜ್ ಮಹಲ್ ಳಾಗಿಯೂ, ಪ್ರದೀಪ್ ಕುಮಾರ್ ಶಾಹಜಹಾನನಾಗಿಯೂ ಅಭಿನಯಿಸಿದ್ದಾರೆ. ಎ. ಸಾದಿಕ್‌ರವರು ನಿರ್ದೇಶಕರಾಗಿದ್ದಾರೆ. ರೋಶನ್‌ರವರು ರಾಗಜೋಡಣೆಯನ್ನು ಮಾಡಿದ್ದಾರೆ.

●

ಗುರುದತ್-ಆಶಾ ಪರೇಖ್

ಗುರುದತ್ ಮತ್ತು ಆಶಾ ಪರೇಖ್ ಪ್ರಧಾನವಾದ ಪಾತ್ರಗಳಲ್ಲಿರುವ ವಾಸು ಫಿಲಮ್ಸ್‌ರವರ ಹಿಂದೀ ಚಿತ್ರ "ಭರೋಸಾ" ತೀವ್ರಗತಿಯಿಂದ ತಯಾರಾಗುತ್ತಲಿದೆ. ಟ್ರಿವೆಂಡ್ರಮ್, ಕೊಚ್ಚಿ ಮತ್ತು ಮಹಾಬಲಿಪುರಗಳಲ್ಲಿ ಈ ಚಿತ್ರಕ್ಕಾಗಿ ಹದಿನೈದು ದಿನಗಳ ಹೊರಾಂಗಣ ಚಿತ್ರೀಕರಣವು ನಡೆಯಿತು. ಆ ಸಮಯದಲ್ಲಿ ಮೂರು ಹಾಡುಗಳು ಮತ್ತು ಕೆಲವು ದೃಶ್ಯಗಳು ಚಿತ್ರೀಕೃತವಾಗಿವೆ.

ಚಿತ್ರವನ್ನು ಕೆ. ಶಂಕರ್‌ರವರು ದಿಗ್ದರ್ಶಿಸುತ್ತಿದ್ದಾರೆ. ಚಿತ್ರದ ಸಹಾಯಕ ಪಾತ್ರವರ್ಗದಲ್ಲಿ ಓಂಪ್ರಕಾಶ್, ಕನ್ಹಯ್ಯಾಲಾಲ್; ನಾನಾ ಪಾಲ್ಸೀಕರ್, ಮಹಮೂದ್, ಲಲಿತಾ ಪವಾರ್, ಸುದೇಶ್ ಕುಮಾರ್, ಶುಭಾ ಖೋಟೆ ಮೊದಲಾದವರು ಇದ್ದಾರೆ. ರಾಜೇಂದ್ರಕೃಷ್ಣನವರು ಸಂಭಾಷಣೆ ಮತ್ತು ಹಾಡುಗಳನ್ನು ಬರೆದಿರುವರು. ರವಿಯವರು ಸಂಗೀತವನ್ನೀಯುವರು.

●

ಫೂಲೋಂಕಿ ಸೇಜ್

ಅಂಜಲೀ ಪಿಕ್ಚರ್ಸ್‌ರವರ ಹಿಂದೀ ಚಿತ್ರ "ಫೂಲೋಂಕಿ ಸೇಜ್"ದ ಮುಹೂರ್ತ/ಸಮಾರಂಭವು ಇತ್ತೀಚೆಗೆ ಮದ್ರಾಸಿನ ವೀನಸ್ ಸ್ಟುಡಿಯೋದಲ್ಲಿ ಜರಗಿತು.

ಚಿತ್ರದ ತಾರಾಗಣದಲ್ಲಿ ಅಶೋಕ್ ಕುಮಾರ್, ವೈಜಯಂತಿಮಾಲಾ ಮತ್ತು ಮನೋಜ್ ಇದ್ದಾರೆ. ಮಹಮೂದ್, ಲಲಿತಾ ಪವಾರ್ ಮತ್ತು ಶುಭಾ ಖೋಟೆ ಸಹಾಯಕ ನಟನಟಿಯರು. ಆದಿನಾರಾಯಣ ರಾವ್‌ರವರು ಚಿತ್ರದ ನಿರ್ಮಾಪಕರು ಮತ್ತು ಸಂಗೀತ ನಿರ್ದೇಶಕರು. ಚಿತ್ರವು ಹಿಂದೀ ಕಾದಂಬರಿ "ಅಂಧೇರೇ ಚಿರಾಗ್"ದ ಮೇಲೆ ಹೊಂದಿಕೊಂಡಿದೆ. ಇಂದರ್ ರಾಜ್ ಆನಂದ್‌ರವರು ಚಿತ್ರನಾಟಕ ಮತ್ತು ಸಂಭಾಷಣೆಗಳನ್ನು ರಚಿಸಿದ್ದಾರೆ. ಹಸ್ರತ್ ಜಯಪುರಿಯವರು ಗೀತೆಗಳನ್ನು ಬರೆದಿದ್ದಾರೆ.

●

ರಾಜೇಂದ್ರಕುಮಾರ್—ವೈಜಯಂತಿಮಾಲಾ

ನಿರ್ಮಾಪಕ ಎಸ್. ಕೃಷ್ಣಮೂರ್ತಿಯವರ ಇನ್ನೂ ಹೆಸರಿಸದ ಚಿತ್ರವೊಂದರಲ್ಲಿ ರಾಜೇಂದ್ರಕುಮಾರ್ ಮತ್ತು ವೈಜಯಂತಿಮಾಲಾ ಪ್ರಧಾನ ಪಾತ್ರದಲ್ಲಿದ್ದಾರೆ. ನಿರಂಜನ ಶರ್ಮ, ಮಹಮೂದ್, ಲಲಿತಾ ಪವಾರ್, ಆಗಾ ಮತ್ತು ಮುಕ್ರಿ ಇತರ ನಟನಟಿಯರು. ಚಿತ್ರವು ವೀನಸ್ ಪಿಕ್ಚರ್ಸ್ ಲಾಂಛನದಲ್ಲಿ ತಯಾರಾಗುತ್ತಲಿದೆ. ಟಿ. ಪ್ರಕಾಶ್‌ರವರು ದಿಗ್ದರ್ಶನದ ಭಾರವನ್ನು ಹೊತ್ತಿರುವರು. ಹಸ್ರತ್ ಜೈಪುರಿ ಬರೆದ ಗೀತೆಗಳಿಗೆ ಶಂಕರ್ ಜೈಕಿಷನ್ ಸಂಗೀತವನ್ನು ನೀಡುವರು.

●

ಹಮ್ ರಾಹಿ

"ಶಾರದಾ", "ಛೋಟಿ ಬಹೆನ್", "ಸಸುರಾಲ್" ಮೊದಲಾದ ಯಶಸ್ವೀ ಚಿತ್ರಗಳ ನಿರ್ಮಾಪಕರಾದ ಎಲ್. ವಿ. ಪ್ರಸಾದ್‌ರವರು ತಮ್ಮ ಹೊಸ ಚಿತ್ರವನ್ನು ಬಿಡುಗಡೆಗೊಳಿಸಿರುವರು. ಜಮುನಾ ಮತ್ತು ರಾಜೇಂದ್ರಕುಮಾರ್ ಪ್ರಧಾನ ಭೂಮಿಕೆಯಲ್ಲಿರುವ ಈ ಚಿತ್ರದ ಹೆಸರು "ಹಮ್ ರಾಹಿ". ಚಿತ್ರದ ಇತರ ತಾರಾಗಣಗಲ್ಲಿ ಮಹಮೂದ್, ಶುಭಾ ಖೋಟೆ, ರಾಜೇಂದ್ರನಾಥ್, ಲಲಿತಾ ಪವಾರ್, ನಾಜೀರ್ ಹುಸ್ಸೇನ್, ಆಗಾ, ಧುಮಾಳ್, ಇಂದಿರಾ ಮತ್ತು ಶಶಿಕಲಾ ಇರುವರು. ಹಸ್ರತ್ ಜೈಪುರಿಯವರು ರಚಿಸಿದ ಹಾಡುಗಳಿಗೆ ಶಂಕರ್ ಜೈಕಿಷನ್‌ರವರು ಸಂಗೀತವನ್ನು ನೀಡಿದ್ದಾರೆ.

—K. S. S.

ಈ ವಾರ ಮಂಗಳೂರಿನ ಚಿತ್ರಮಂದಿರಗಳಲ್ಲಿ

ಸೆಂಟ್ರಲ್
ಅಸೀ ಕಾ ನಾಮ್ ದುನಿಯಾ ಹೈ (ಹಿಂದಿ)
ಅಶೋಕ್ ಕುಮಾರ್—ಶ್ಯಾಮಾ
ದಿನಂಪ್ರತಿ 3 ದೇಖಾವೆಗಳು.

ರೂಪವಾಣಿ 2ನೇ ವಾರ
ಅಸ್ ಪಡ್ (ಹಿಂದಿ)
ಧರ್ಮೇಂದರ್—ಮಾಲಾಸಿನ್ಹಾ—ಬಲರಾಜ್ ಸಹಾನಿ—ಧುಮಾಳ್.
ದಿನಂಪ್ರತಿ 3 ದೇಖಾವೆಗಳು.

ಪ್ರಭಾತ್
ಸುಮೈತಾಂಗಿ (ತಮಿಳು)
ಜೆಮಿನಿ ಗಣೇಶನ್—ದೇವಿಕಾ
ದಿನಂಪ್ರತಿ 3 ದೇಖಾವೆಗಳು.

ರಾಮಕಾಂತಿ
ತೇಜಸ್ವಿನಿ (ಕನ್ನಡ)
ರಾಜಕುಮಾರ್—ಪಂಡರಿಬಾಯಿ
ದಿನಂಪ್ರತಿ 3 ದೇಖಾವೆಗಳು.

BALAJI Daily 3 Shows
GRASS IS GREENER
(CINEMASCOPE-COLOR)
CARY GRANT

ನ್ಯೂ ಚಿತ್ರಾ
ವೀರ ತಿರುಮಗನ್ (ತಮಿಳು)
ಆನಂದನ್—ಪುಷ್ಪಲತಾ—ಅಶೋಕನ್
ದಿನಂಪ್ರತಿ 4 ದೇಖಾವೆಗಳು.

ಜ್ಯೋತಿ
ಸನ್ ಒಫ್ ಇಂಡಿಯಾ (ಹಿಂದಿ)
ಮಾಸ್ಟರ್ ಸಜೀದ್—ಕಮಲ್‌ಜೀತ್
ದಿನಂಪ್ರತಿ 3 ದೇಖಾವೆಗಳು.

Printed at The Prabhat Printers, Ltd., Mangalore and Edited & Published at Prabhat Office, Car Street, Mangalore by K.V.Shenoy.